# ಕೊರವಂಜಿ



*Koravanji*

ಆಗಸ್ಟ್
೧೯೫೭

★

ಸಂಪಾದಕರು :
ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಅ. ರಾ. ಸೇ.
ಶ್ರೀ॥ ರಾಮಿ
ಶ್ರೀ॥ ನಾ. ಕಸ್ತೂರಿ
ಶ್ರೀ॥ ದಾಶರಥಿ ದೀಕ್ಷಿತ್.

ಇತ್ಯಾದಿ, ಇತ್ಯಾದಿ.

ನಗೆಯ ಮಾಸಪತ್ರಿಕೆ

## ಆಗಸ್ಟ್ ತಿಂಗಳಲ್ಲಿ ಬಿಡುಗಡೆ!

**ಸಂದರ್ಭ ಬಲದಿಂದ ಕಳ್ಳರ ಗುಂಪಿಗೆ ಸೇರಿದ ನಿಸ್ಪೃಹ ಯುವಕನೊಬ್ಬನ ಕುತೂಹಲ ಕೆರಳಿಸುವ ಕಥೆ!**

ಚಂದಮಾಮಾ ಫಿಲಂಸ್‌ರವರ—

# ದೊಂಗಲ್ಲೋ ದೊರ (ತೆಲುಗು)

ಮತ್ತು


# ಪಕ್ಕಾ ತಿರುಡನ್ (ತಮಿಳು)



ಜಮುನಾ — ಎ. ನಾಗೇಶ್ವರರಾವ್ — ಆರ್. ನಾಗೇಶ್ವರರಾವ್
ಗುಮ್ಮಡಿ — ರೇಲಂಗಿ — ಹೆಲೆನ್ — ಇ. ವಿ. ಸರೋಜ ಮುಂತಾದವರು.

ನಿರ್ದೇಶನ: ಪಿ. ಚೆಂಗಯ್ಯ. ★ ಸಂಗೀತ: ಘಂಟಸಾಲ

**VIKRAM RELEASE**




ಸಂಪುಟ ೧೭ | ಆಗಸ್ಟ್ ೧೯೫೭ | ಸಂಚಿಕೆ ೫

## ಕುಹಕಿಡಿಗಳು

ರಕ್ತ ಹೀರುವ ಸೊಳ್ಳೆಗಳು ಗುಂಯ್‌ಗುಟ್ಟಿ ಸಾಮೂಹಿಕವಾಗಿ ಬಂದಾಗ "ಚಲೋ ದಿಲ್ಲಿ" ಎಂದು ಕೂಗುಹಾಕಿದೆ. "ರಕ್ತ ಹೀರುವುದಕ್ಕೆ ಅಲ್ಲೇ ಚೆನ್ನ" ಎಂದರಿತು ಅವೆಲ್ಲವೂ ಹಾರಿಹೋದುವು ದೆಹಲಿಗೆ—

—ಆದಕಾರಣ ಡಿ ಡಿ.ಟಿ. ಗ್ಯಾಮಿಕ್ಸಾನ್ ನಮಗೆ ಬೇಡ ಎಂದೊಬ್ಬ ಅಧಿಕಾರಿ ದೊರಕದೆ ಇದ್ದವರೊಬ್ಬರು ಕಾಗದ ಬರೆದಿದ್ದಾರಂತೆ.

*   *   *

"ನಮ್ಮ ಜನರಲ್ಲಿ ಸುಸ್ತು ಹೆಚ್ಚಾಗಿದೆ; ಬೇಸರ ಬಂದಿದೆ; ಜಾಗ್ರತಿ ಇಲ್ಲ ಕಾರಣ ಗೊತ್ತಿಲ್ಲ" ಎಂದು ಪ್ರಜಾಸಭೆಯಲ್ಲಿ ಒಬ್ಬ ನಾಯ್ಕರಂದರಂತೆ.

—ನಾಯ್ಕರ ಸಭಾ ಭಾಷಣಗಳನ್ನು ಓದಿ ಹೀಗಾಗಿರಬಹುದೇ?

*   *   *

ಆರ್ಥಿಕ ಸಚಿವರು ರಾಜೀವಪುರಕ್ಕೆ ಭೇಟಿಯಿತ್ತಾಗ ಆ ಊರಿನ ಮಹಿಳೆಯರೆಲ್ಲರೂ ಹಿತ್ತಾಳೆ ಒಡವೆಗಳನ್ನೇ ಧರಿಸಿದ್ದರಂತೆ.

*   *   *

ಈ ವರ್ಷ ಜ್ಯೇಷ್ಠಮಾಸದಲ್ಲಿ ಆದ ಮದುವೆಮನೆಗಳಲ್ಲಿ— ಮಾವಿನಸೊಪ್ಪಿನ ತೋರಣದ ಬದಲು, ಯೂಕಲಿಪ್ಟಸ್ ತೋರಣವನ್ನು 'ಫ್ಲೂ' ನಿಮಿತ್ತ ಕಟ್ಟಿದ್ದರೆಂಬುದು ದಿಟವಲ್ಲವಂತೆ !

—ಆ ರೀತಿ ಸರ್ಕಾರದ ಸಲಹೆ ಬಂದಿದ್ದರೂ, ಹಳೇ ಸಂಪ್ರದಾಯವೇ ಆಚರಿಸಲ್ಪಟ್ಟಿತಂತೆ.

* * *

ಎಂ.ಎಲ್.ಎ.ಗಳೊಬ್ಬರು, ಕೋಲೆಬಸವನೊಂದನ್ನು ಮುದ್ದಿಗಾಗಿ ಸಾಕುತ್ತಿದ್ದಾರಂತೆ.

—ಮುಖ್ಯಮಂತ್ರಿಗಳು ಕೋಲೆಬಸವನೊಂದನ್ನು ಎಂ. ಎಲ್. ಎ ಗಳಾಗಿ ಸಾಕುತ್ತಿದ್ದಾರೆಂಬುದಕ್ಕೆ ಸಾಕ್ಷ್ಯ ದೊರೆತಿಲ್ಲವಂತೆ.

* * *

ಪ್ರಧಾನಾಮಾತ್ಯರಾಗಿ ಪಾಶ್ಚಾತ್ಯದಲ್ಲಿ ಪ್ರವಾಸಮಾಡುತ್ತಿರುವ ಮಿ|| ಸುಹ್ರವರ್ದಿಯವರು, ಸ್ವಕ್ಷೇಮದ ಸಲುವಾಗಿ ಅಲ್ಲೇ ವಿದೇಶಿರಾಯಭಾರಿಯಾಗಿ ಉಳಿಯುತ್ತಾರೆ, ಎಂಬ ಸುದ್ದಿ ಕರಾಚಿಯಲ್ಲಿ ಹರಡುತ್ತಿದೆ.

* * *

ಪಾಂಡವರು ಅರಗಿನಮನೆಯಲ್ಲಿದ್ದಂತೆಯೇ-ನಾವುಗಳು ಕೂಡ ಈಗ ಪ್ರಧಾನ ಸಚಿವಾಲಯ ದಲ್ಲಿರುವುದು ಎಂದು ಮಾಜಿಸಚಿವರೊಬ್ಬರು ಹೇಳಿದರಂತೆ.

* * *

"ದೇಶದಲ್ಲಿ ಸಾಕಷ್ಟು ಆಹಾರವಿದೆ" ಎಂದು ಬಹಿರಂಗವಾಗಿ ಘೋಷಿಸಿದ ಆಹಾರ ಸಚಿವರು, ಮನೆಗೆ ಹಸಿದು ಬಂದಾಗ ತುಂಬೆಸೊಪ್ಪಿನ ಅಂಬಲಿಯನ್ನು ಹೊಟ್ಟೆ ತುಂಬಾ ಕುಡಿದು ಮಲಗಿದರಂತೆ.

— ತುಂಬೆಸೊಪ್ಪಿನ ಅಂಬಲಿ ಗಾರಾದ ಗಂಟಲಿಗೆ ತಂಪುಮಾಡುತ್ತಂತೆ !

* * *

ಮನೆಯಾಕೆ ಕೊಂಡ ಟಿಸ್ಯೂ ಸೀರೆಯನ್ನು ಕಂಡ ಮನೆಯಾತನ ಹಣದ ಚೀಲವು ಬೆತ್ತಲೆ ಬೆರೆಗಾಯ್ತಂತೆ.

* * *

ಸ್ತ್ರೀ ಮಲಯಾಳದ ನಿಯೋಗದವರು ಭಾರತದಲ್ಲೆಲ್ಲಾ ಸಂಸಾರಗಳನ್ನು ನೋಡಿಕೊಂಡು ಬಂದ ತರುವಾಯ ತಮ್ಮೂರಿನಲ್ಲಿ ಘೋಷಿಸಿದರಂತೆ, "ಭಾರತದ ಎಲ್ಲ ಸಂಸಾರಗಳಲ್ಲೂ ನಮ್ಮ ಸಂಪ್ರದಾಯವೇ ಅನುಸರಿಸಲ್ಪಡುತ್ತಿದೆ. ಆದಕಾರಣ ನಾವು ಪ್ರಚಾರಮಾಡುವ ಗೋಜೇ ಇಲ್ಲ" ಎಂದು.

* * *

— o —

# ಊರಿಗಾಳು

"ಜೀಯೋಫಿಸಿಕಲ್ ವರ್ಷ ಬಂದಾಗಿನಿಂದ, ನಮ್ಮ ಯಜಮಾನರು ಉತ್ತರ ಮುಖಿಯನ್ನೇ ನೋಡುತ್ತಿದ್ದಾರೆ ಹಗಲೂ ರಾತ್ರಿ" ಎಂದು ಚಂದ್ರಮುಖಿ ಬಿಸುಸುಯ್ದಳಂತೆ, ತಂಪಿನ ಸಂಜೆ, ಮಲ್ಲಿಗೆಬಳ್ಳಿಯಡಿ.

* * *

"ಸರ್ಕಾರದವರು ನಮ್ಮ ಬೆದರಿಕೆಗೆ ಹೆದರಿ ನಾವು ಕೇಳಿದ್ದೆಲ್ಲವನ್ನೂ ಕೊಡುತ್ತಾರೆ, ಆದಕಾರಣ ಸಂಪು ಹೂಡಬೇಕಾಗಿಲ್ಲ" ಎನ್ನುವ ಕಾಗದ ಅವರುಗಳಿಗೆ ವೈಯಕ್ತಿಕವಾಗಿ ೨ನೇ ತಾರೀಖೇ ಅವರ ಸಂಘದ ಕಾರ್ಯದರ್ಶಿಯಿಂದ ಬಂದಿದ್ದರೂ ಕೂಡ, "ಸಂಪು" ಶತಾಂಶ ೬೦ರಷ್ಟು ಜನರಿಂದ ಹೂಡಲ್ಪಟ್ಟಿತಂತೆ!!

—ಅಂಚೆ ಇಲಾಖೆಯವರ ಕಾರ್ಯ ಜಾಗ್ರತೆಗೆ ಸಾಕ್ಷಿ!!

* * *

ಸಂತಾನಸಂಯಮದ ಸಲಹಾಲಯವನ್ನು ಕೇಂದ್ರ ಸರ್ಕಾರದವರು ಆರಂಭಿಸಿದ ಮೇಲೆ ನಮ್ಮ ಹಳ್ಳಿಯಲ್ಲಿ ಕಳೆದ ಮೂರು ವರ್ಷದಲ್ಲಿ ಒಂದೇ ಹೆರಿಗೆಯಾಗಿರುವುದು ಎಂದು ಹಳ್ಳಿಯ ವರದಿಗಾರರು ಜಂಭದಿಂದ ತಿಳಿಸಿದ್ದಾರೆ.

—ಸಲಹಾಲಯದ ಅಧಿಕಾರಿ ಸ್ತ್ರೀಯಳೇ ಹೆತ್ತತಾಯಿ ಎಂಬುದನ್ನು ತಿಳಿಸಿಲ್ಲ!

* * *

ಭರತನಾಟ್ಯವನ್ನು ಅಮೋಘವಾಗಿ ಪ್ರದರ್ಶಿಸಿದ ಕುಮಾರಿ ಕನ್ಯಾಳನ್ನು "ನಿನ್ನ ಪ್ರೌಢಿಮೆಯ ಅಂತರಂಗವೇನು" ಎಂದು ಕೇಳಿದಾಗ, ಆ ೧೨ ವರ್ಷದ ಮುಗ್ಧೆ "ಅಮ್ಮಾ! ಹೇಳಿದಳು ಚಾಪೆಮೇಲೆ ಕುಣಿ, ಜಮಖಾನದಮೇಲೆ ಕೂಡದು, ಅಂತ, ಚಾಪೆಮೇಲೆ ದೊಪ್ಪನೆ ತಾಳಕ್ಕೆ ಸರಿಯಾಗಿ ಕಾಲಿಟ್ಟರೆ, ತಕ್ಷಣ ಎರಡೂ ಕಾಲೆತ್ತುವ ಹಾಗೆ ನೋವಾಗುತ್ತೆ" ಎಂದು ಹೇಳಿದಳಂತೆ.

* * *

ಅಖಿಲ ಭಾರತ ವ್ಯಾಯಾಮ ಸ್ಪರ್ಧೆಗಳಲ್ಲಿ, ಹೆಬ್ಬಿಗುಬ್ಬಾಲೆಯ ಹೆಂಗಸರು "ಲಟ್ಟಣಿಗೆ ಪ್ರಯೋಗ"ದಲ್ಲಿ ಅಪ್ರತಿಮ ಕೀರ್ತಿಗಳಿಸಿದರಂತೆ.

—ಹತ್ತುಗಜ ದೂರದಿಂದ ಹತ್ತು ಸೆಕೆಂಡಿನಲ್ಲಿ ಹತ್ತು ಗುರಿಗಳನ್ನು ಹೊಡೆದರಂತೆ!!

* * *

ಅಖಿಲ ಭಾರತ ವ್ಯಾಯಾಮ ಸ್ಪರ್ಧೆಗಳಲ್ಲಿ ಹೆಬ್ಬಿಗ-ಬ್ಬಾಲೆಯ ಗಂಡಸರು "ತಲೆ ತಪ್ಪಿಸಿ"ಕೊಳ್ಳುವ ಸ್ಪರ್ಧೆಯಲ್ಲಿ ಅಪ್ರತಿಮ ಕೀರ್ತಿಗಳಿಸಿದರಂತೆ.

—ಹತ್ತುಗಜ ದೂರದಿಂದ ಹತ್ತು ಸೆಕೆಂಡಿಗೊಮ್ಮೆ ಹಾರಿ ಬರುವ ಹತ್ತು ಹತಕಾರಿ ಅಸ್ತ್ರಗಳನ್ನು, ಹತ್ತೂ ಬಾರಿ ತಪ್ಪಿಸಿಕೊಂಡರಂತೆ!!

* * *

ಇವರ ಹತ್ತಿರ ಸೋಪು ಕೊಂಡುಕೊಂಡಾಗ, ಇವರ ಮುಖದಮೇಲಿನ ಸಂತಸದ ಕೃತಜ್ಞತೆಯ ಮುಖಭಾವಕ್ಕೂ, ಈಗ ಇವರೇ ಅದೇ ಸೋಪನ್ನು ಅದೇ ರೀತಿ ಮಾರಿ ಸಂಪಾದಿಸಿದ ಹಣವನ್ನು ಹೀರಲು ತೊಡಗಿರುವಾಗ ಮೂಡಿರುವ ಮುಖಭಾವಕ್ಕೂ ಅರ್ಥಾರ್ಥಿಕ ಸಂಬಂಧವಿಲ್ಲವಲ್ಲಾ ಎಂದು ಹಳೆ ಗಿರಾಕಿಗಳು ಹೊಸ ತೆರಿಗೆ ಮಂತ್ರಿಯನ್ನು ನೋಡಿ ಹೇಳುತ್ತಿರುವುದು ನಿಜವೆಂಬುದು, ಖಚಿತವಲ್ಲವಂತೆ.

* * *

ಕಾಫೀ ಚರಟವನ್ನು ಭಟ್ಟತಲೆಗೆ ಉಪಯೋಗಿಸಿದರೆ, ಕೂದಲು ಬೆಳೆಯುತ್ತದೆ ಎಂದನಂತೆ ಐವತ್ತರ ಗಂಡ; ಕಾಫೀ ಕುಡಿಯುತ್ತಿದ್ದಾಗ.

—ಆದರೆ ಅದು ಮೀಸೆಗೆ ಚೆನ್ನಿಲ್ಲ ಅಂದರೆ, ಅಂದಳಂತೆ ನಾಲ್ವತ್ತರ ಹೆಂಡತಿ, ಗಂಡನ ಹೊರವಾದ ಮೀಸೆಯ ಅಲಂಕಾರವನ್ನು ನೋಡಿ ನೆನೆದು.

* * *

ಶ್ರೀಮಾನ್ ಟ ಟಿ.ಕೆ. ಅವರು ರುಮಾಲು ತೆರಿಗೆ ಹಾಕಿ, ಖೋತಾ ಬಜೆಟ್ಟನ್ನು ಸರಿದೂಗಿಸಲು ಪ್ರಯತ್ನಿಸುತ್ತಿರುವರೆಂದು ಕೇಳಿ,

"ಸ್ವಾಮಿ! ಬಿಳಿಟೋಪಿಗೆ ತಕ್ಕ ತೆರಿಗೆ ಹಾಕಿದರೆ ಖೋತಾ ಬಜೆಟ್ಟನ್ನು ಖಂಡಿತ ಸರಿಪಡಿಸಬಹುದು ಎಂದು ರುಮಾಲಿನವರು ಸಲಹೆಯಿತ್ತಿದ್ದಾರೆಂಬುದು ನಿಜವಲ್ಲವಂತೆ!!

* * *

ಸಹಸ್ರ ಚಂದ್ರಮುಖಿಯರ ಹೆರಿಗೆಯನ್ನು ಸುಸೂಕ್ತವಾಗಿ ಮಾಡಿದ ಸೂಲಗಿತ್ತಿಯನ್ನು ಅಭಿನಂದಿಸುವ ಸಲುವಾಗಿ ಆಸ್ಪತ್ರೆಯಲ್ಲಿ ಹಬ್ಬವನ್ನಾಚರಿಸಿದರಂತೆ.

—ಮೊದಲ ಅಭಿನಂದನಾ ಭಾಷಣವನ್ನೂ, ಕೊನೆಯ ಅಭಿವಂದನಾ ಭಾಷಣವನ್ನೂ ಆಕೆಯ ಸ್ವಂತ ಮಕ್ಕಳೇ ಮಾಡಿದರಂತೆ.

* * *

ಆರ್ಥಿಕ ಸಚಿವ ಶ್ರೀಮಾನ್ಯ ಮರಿಯಪ್ಪನವರು ಬರುತ್ತಿದ್ದಾರೆಂಬುದು ತಿಳಿದಾಗ ದೇವಸ್ಥಾನವೊಂದರಲ್ಲಿ, ದೇವರು ತನ್ನ ಒಡವೆ ವಸ್ತು ಭೂಷಣ ವಸ್ತ್ರಗಳನ್ನು ಮರೆಮಾಚಿಕೊಂಡನೆಂಬುದು ವರದಿಯಾಗಿದೆ.

* * *

# ನೀತಿಯ ಕತೆಗಳು

## ಬಲಿತವರಿಗೆ

ಹಿಂದಾನೊಂದು ಕಾಲದಲ್ಲಿ ಒಂದಾನೊಂದು ತಾಲ್ಲೂಕಿನಲ್ಲಿ ನರ—ಸಿಂಹನೆಂಬೊಬ್ಬ ನಾಯಕನು ಇದ್ದನಂತೆ. ತಾಲ್ಲೂಕಿನ ಆಫೀಸರು, ಕಾರ್ಯವರ್ಗದವರೂ, ಪೋಲೀಸಿನವರೂ, ವ್ಯಾಪಾರಸ್ಥರೂ, ಕಡೆಗೆ ಉಪಾಧ್ಯಾಯರುಗಳು ಕೂಡ ನರಸಿಂಹಯ್ಯ ಅಂದರೆ ಹೆದರಿ, ಅವನು ಹೇಳಿದಂತೆ ಕೇಳುತ್ತಿದ್ದರಂತೆ.

ನರಸಿಂಹಯ್ಯನ ಬೆಂಬಲದಿಂದಲೇ ರಾಜ್ಯದ ಸಚಿವ ಅಧಿಕಾರ ಪಡೆದಿದ್ದನಂತೆ. ಪೋಲೀಸ್ ಪೋರ್ಟ್‌ಫೋಲಿಯೋ ಕೂಡ ಬಂದಿತ್ತಂತೆ.

ಒಂದು ಸಾಯಂಕಾಲ ಪಕ್ಕದಲ್ಲಿದ್ದ ಕಾಡಿನಲ್ಲಿ ಬೆಳೆದಿದ್ದ ಗಂಧದಮರಗಳನ್ನು ಕಡಿದು ಕಳ್ಳಸಾಗಾಣಿಕೆಗೆ ಏರ್ಪಾಟುಮಾಡಿ, ಎರವಲು ಪಡೆದ ಪೋಲೀಸ್‌ವ್ಯಾನಿನಲ್ಲಿ ಕಳ್ಳಸಂತೆಗೆ ತಾನೇ ಖುದ್ದುನಿಂತು ಸಾಗಿಸಿದಮೇಲೆ, ನರಸಿಂಹಯ್ಯ ಒಂದು ಬೀಡಿ ಹಚ್ಚಿಕೊಂಡು ಊರಕಡೆಗೆ ಒಬ್ಬನೇ ಹಿಂತಿರುಗಿ ಬರುತ್ತಿದ್ದನಂತೆ.

ಹತ್ತುಹೆಜ್ಜೆ ಇಡುವುದರೊಳಗೆ ಬೀಡಿ ಮುಗಿದಿತ್ತಂತೆ. ಅದನ್ನು ಪಕ್ಕಕ್ಕೆ ಎಸೆದನಂತೆ. ಉರಿಯುತ್ತಿದ್ದ ಬೀಡಿ ತುಂಡು ಪೊದರಿನೊಳಕ್ಕೆ ಬಿದ್ದ ತಕ್ಷಣ ಹೆಬ್ಬಾವೊಂದು ರೇಗಿ ಬಂದು ಇವನ ಕಾಲನ್ನು ಸುತ್ತಿಕೊಂಡು ಸೊಂಟಕ್ಕೆ ಎರಡನೇ ಸುರುಳಿಯನ್ನು ಹಾಕಿತಂತೆ. ಆಗ ನರಸಿಂಹಯ್ಯ ಅಯ್ಯೋ! ಎಂದು ಕೂಗಿದನಂತೆ. ಅವನೊಬ್ಬನೇ ಆಗ–ಏಕಾಂಗಿ ಕಾಡಿನ ಅಂಚಿನಲ್ಲಿದ್ದರೂ, ಕಾಡು ಕಾಡೇ!

ಸುರುಳಿ ಸುತ್ತಿದ್ದ ಹೆಬ್ಬಾವಿನ ಉದ್ದ ಸಾಕಷ್ಟು ಇಲ್ಲದುದರಿಂದ ಇವನ ಸೊಂಟದ ಸುತ್ತ ಸುತ್ತಿದಮೇಲೆ, ಇವನ ಹೊಕ್ಕಳ ಮಟ್ಟಕ್ಕೆ ಅದರ ಬಾಯಿ ಬಂದಿತ್ತಂತೆ. ಇವನ ಸೊಂಟಕ್ಕೆ ಸಿಕ್ಕಿಸಿದ್ದ ಹಣದ ಚೀಲ ಮಾತ್ರ ಹಾವಿನ ಬಾಯಿಗೆ ಸಿಕ್ಕಿತಂತೆ. ಅದನ್ನೇ ಅದು ಕಚ್ಚುತ್ತಿತ್ತಂತೆ.

ಕಾಡಿನಂಚಿನಲ್ಲಿ ಒಬ್ಬನೇ ವಾಸವಾಗಿದ್ದ ಹಾವಾಡಿಗರ ಮಾದನಿಗೆ 'ಅಯ್ಯೋ' ಕೇಳಿಸಿತಂತೆ. ಐವತ್ತರ ಪ್ರಾಯದ ಅವನೋಡಿಬಂದು ನರಸಿಂಹಯ್ಯನ ಅವಸ್ಥೆ ನೋಡಿದನಂತೆ. ಬೇಗ ಪೂಂಜಿ ಹಿಡಿದು ಬಾರಿಸಿದನಂತೆ. ಹಾವು ಸಡಿಲಮಾಡಿಕೊಂಡು ಕೆಳಕ್ಕಿಳಿದು ಮಾದನಮುಂದೆ ಆಡತೊಡಗಿತಂತೆ. ಮಾದ ಅದನ್ನು ಹುತ್ತದ ಹತ್ತಿರಕ್ಕೆ ಪೂಂಜಿ ಬಾರಿಸುತ್ತಾ ಸಾಗಿಸಿ, ಹುತ್ತಕ್ಕೇ ನುಗ್ಗಿಸಿದನಂತೆ.

ನರಸಿಂಹಯ್ಯನಿಗೆ ಬಲು ಖುಷಿಯಾಯ್ತಂತೆ. "ಎಲ! ಎಲಾ! ಈ ಮಾದನ ಹರೆಯ ಹೆಂಡತೀನ, ಬೆಂಗಳೂರಿಗೆ ಹೋದಾಗ ನನ್ನ ಅನುಕೂಲಕ್ಕಿರಲಿ ಎಂದು ನಾನೇ ಹಾರಿಸಿಕೊಂಡುಹೋಗಿದ್ದೆ. ಆದರೂ ಇವ ಇಂದು ನನ್ನ ಆಪತ್ಕಾಲದಲ್ಲಿ ಬಂದು ನನ್ನ ಜೀವವನ್ನುಳಿಸಿ ಪ್ರಾಣದಾನಮಾಡಿದ್ದಾನೆ. ಇವನ ಋಣವನ್ನು ನಾನು ಹೇಗೆ ತೀರಿಸಲಿ" ಎಂಬ ಕೃತಜ್ಞತೆಯು, ಔದಾರ್ಯದ ಉರುಲಿನಲ್ಲಿ ಸಿಕ್ಕಿ ಹಾಕಿಕೊಂಡನಂತೆ. ಆ ಸ್ಥಿತಿಯಲ್ಲಿ ಮಾದನನ್ನು ಕೇಳಿದನಂತೆ ನಿನಗೇನು ಬೇಕೋ ಕೇಳು ನಡೆಸಿಕೊಡುತ್ತೇನೆ ಎಂದು.

ಮಾದ ಒಂಟಿಜೀವನಮಾಡುತ್ತಿದ್ದ ಊರಾಚೆ ಇರುವ ಬಡವನಂತೆ. ನರ ಸಿಂಹಯ್ಯನ ದೌಲತ್ತು ಅಧಿಕಾರ ಐಶ್ವರ್ಯ ಎಲ್ಲವನ್ನೂ ಕಂಡಿದ್ದವನಂತೆ. ನರ ಸಿಂಹಯ್ಯನ ೧೮ ವರ್ಷದ, ತಿಲರಂತೆ ಕಾಣುವ ಮದುವೆಯಾಗದ ಮಗಳನ್ನೂ ಕಂಡಿದ್ದನಂತೆ. ಆಗಾಗ್ಗೆ ಕಂಡು ಮನಸ್ಸಿನಲ್ಲೇ ಕುದಿಯುತ್ತಿದ್ದನಂತೆ. ಆ ನೆನಪಿ ನಿಂದಲೇ ಕೇಳಿಯೇಬಿಟ್ಟನಂತೆ.

"ನಿಮ್ಮ ಮಗಳನ್ನು ನನಗೆ ಕೊಟ್ಟು ಮದುವೆಮಾಡಿಕೊಡಿ" ಎಂದು.

* * *

ಕೊಟ್ಟ ಮಾತಿನಂತೆ ನರಸಿಂಹಯ್ಯ ಮಾದನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡಿದನಂತೆ. ದೇಶದ ನಾಯ್ಕರೆಲ್ಲಾ, ಊರ ಹಿರಿಯರೆಲ್ಲಾ, ಪತ್ರಿಕೆ ಯವರೆಲ್ಲಾ ಎಂಥ ಸೊಬಗು ಎಂದು ಅಚ್ಚರಿಯಾದರಂತೆ.

"ನನ್ನ ಯೌವನದ ಚರಿತ್ರೆ ತಿಳಿದಮೇಲೆ ಕೂಡ, ನನ್ನನ್ನು ನೋಡಿದಮೇಲೆ ಕೂಡ, ನನ್ನ ಕೈಹಿಡಿಯಲು ಮುಂದೆಬಂದ ಮಹರಾಯನನ್ನು ಗಂಡ" ಎಂದೊಪ್ಪಿ ಕೊಂಡಳಂತೆ. ತಾಳಿ ಕಟ್ಟಿಸಿಕೊಂಡಳಂತೆ.

* * *

ಆ ರಾತ್ರಿ ಊಟವಾದಮೇಲೆ ಹೆಂಡತಿ ಕೊಟ್ಟ ಎಲಡಿಕೆ ಕಡ್ಡೀಪುಡಿಯನ್ನು ತಿನ್ನುತ್ತಿದ್ದಾಗ ಮುಂಬರುವ ಸುಖವನ್ನು ನೆನೆದ ಮಾದನಿಗೆ ಬಲು ಖುಷಿಯಾಗಿ, "ಒಂದುಬಾರಿ ಪೂಂಗಿ ಬಾರಿಸುತ್ತೇನ್ಲೇ" ಎಂದನಂತೆ ಪೂಂಜಿ ತೆಗೆದು ಬಾರಿಸೇ ಬಿಟ್ಟನಂತೆ ಸೂರಿನಲ್ಲಿದ್ದ ನಾಗರಹಾವು ಎದುರಿಗೆ ಬಂದು ಹೆಡೆಯೆತ್ತಿ ನಾಚ್ ಮಾಡಿಯೇಬಿಟ್ಟಿತಂತೆ. ಹೆದರಿದ ಹೆಂಡತಿ ಕೈಲಿದ್ದ ಎಲಡಿಕೆ ತಟ್ಟೆಯನ್ನು ರೊಯ್ಯನೆ ಹಾವಿನ ಹೆಡೆಗೆ ಗುರಿಯಿಟ್ಟು ಎಸೆದೇಬಿಟ್ಟಳಂತೆ. ತಟ್ಟೆ ಗುರಿತಪ್ಪಿ ಪೂಂಗಿಯನ್ನು ತಾಕಿತಂತೆ. ಹಾಡು ನಿಂತಿತಂತೆ. ನಾಗರಹಾವು ರೇಗಿ ರಸಭಂಗಮಾಡಿದ ಪೂಂಗಿ ಯವನನ್ನು ಕಚ್ಚಿ ಸೂರಿನೆಡೆಗೆ ಹರಿದುಹೋಗಿ ಅದೃಶ್ಯವಾಯ್ತಂತೆ. ಮಾದ ಮೂರು ನಿಮಿಷದಲ್ಲಿ ನೀಲಿಗಟ್ಟಿ ಹರೋಹರವಾದನಂತೆ.

ಬಾಗಿಲು ತೆರೆದುಕೊಂಡುಬಂದು, ಅಮಲಿನಲ್ಲಿ ಮಲಗಿದ್ದ ಅಪ್ಪನನ್ನೆಬ್ಬಿಸಿ, ಮಗಳು ನಡೆದುದನ್ನು ಹೇಳಿದಳಂತೆ. "ಅಪ್ಪಾ! ಈ ಮನೆಯಲ್ಲಿ ಮಲಗಲು ಹೆದರಿಕೆ.

ಪೋಲೀಸ್‌ಸ್ಟೇಷನ್ನಿನಲ್ಲಿ ಮಲಗುತ್ತೇನೆ" ಎಂದು ಹೇಳಿ ಪೋಲೀಸ್‌ಸ್ಟೇಷನ್ನಿನ ದಾರಿ ಹಿಡಿದಳಂತೆ.

ನರಸಿಂಹಯ್ಯ ವಾದನ ಮುಂದಿನ ಕಾರ್ಯಕ್ರಮವನ್ನೆಲ್ಲಾ ಶ್ರದ್ಧೆಯಿಂದ ಆ ರಾತ್ರಿಯೇ ಮಾಡಿದನಂತೆ.

**ನೀತಿ :—**

ಕಂತೆಗೆ ತಕ್ಕ ಬೊಂತೇನೇ ಕಟ್ಟಬೇಕು
ಸಂತೆಗೆ ತಕ್ಕ ಸೀರೇನೇ ನೆಯ್ಯಬೇಕು.
ವಯಸ್ಸಿಗೆ ತಕ್ಕ ಮದುವೇನೇ ಮಾಡಬೇಕು.
ಬಿಎಸ್ಸಿಗೆ ತಕ್ಕ ಜೋಡಿಯನ್ನೇ ಹುಡುಕಬೇಕು.

*   *   *

## ಸಾಕ್ಷ್ಯ

ದರೋಡೆ ಮೊಕದ್ದಮೆಯಲ್ಲಿ ಜಗ್ಗೋಜಿಯ ಹೆಬ್ಬೆಟ್ಟಿನ ಗುರುತೇ ಹಿರಿಯ ಸಾಕ್ಷ್ಯವಾಗಿತ್ತು. ನ್ಯಾಯಾಸ್ಥಾನದಲ್ಲಿ ಪೋಲೀಸಿನವರು ಸಾಕ್ಷ್ಯವನ್ನು ಸಂಪುಷ್ಟಿಯಿಂದ ನೇಯ್ದಿದ್ದರು.

ಬೆರಳು ಗುರ್ತಿನ ಪಂಡಿತನು ಇಡೀ ಮಾನವ ಲೋಕದಲ್ಲಿ ಒಂದು ಬೆರಳಿನ ಗುರ್ತಿನಂತೆ ಇನ್ನೊಂದು ಇರುವುದಿಲ್ಲ, ಈ ರೇಖೆ ಈ ರೀತಿ, ಈ ಶಂಖು ಹೀಗೆ, ಆ ಚಕ್ರ ಆ ರೀತಿ ಎಂದೆಲ್ಲಾ ಶಾಸ್ತ್ರೀಯವಾಗಿ ವಿವರಿಸಿದ್ದ. ಪೋಲೀಸರ ವಾದ, ಸಾಕ್ಷ್ಯ ಮುಗಿದಿತ್ತು.

ಜಗ್ಗೋಜಿ ನಗುತ್ತಲೇ ಇದ್ದ. ಅವನ ಲಾಯರೂ ಶಾಂತಿಯಿಂದಲೇ ಇದ್ದರು. ಕೋರ್ಟಿನಲ್ಲಿದ್ದವರೆಲ್ಲರೂ ಇದೇನು ಸೋಜಿಗ, ಜಗ್ಗೋಜಿಯ ಸುತ್ತಲೂ ಸಾಕ್ಷ್ಯದ ಬಲೆ ಬಿಗಿಯುತ್ತಿರುವಾಗಲೂ ನಗುತ್ತಿದ್ದಾನೆ ಎಂದು ಆಶ್ಚರ್ಯಪಟ್ಟರು

ಪ್ರತಿ ವಾದ, ಪ್ರತಿ ಸಾಕ್ಷ್ಯಕ್ಕೆ ಶುರುವಾಯಿತು. ಮುನ್ನೋಜಿಯನ್ನು ಕರೆ ತಂದರು. ಹದಿನಾರುವರ್ಷದ ಹರೆಯನಾದ ಅವನ ಹೆಬ್ಬೆಟ್ಟಿನ ಗುರುತನ್ನು ತೆಗೆದು ಕೊಂಡರು ಜಗ್ಗೋಜಿಯ, ಮುನ್ನೋಜಿಯ, ಹೆಬ್ಬೆಟ್ಟಿನ ಗುರುತುಗಳನ್ನು, ಬೆರಳು ಗುರ್ತಿನ ಪಂಡಿತನೆದುರಿಗೆ ಇಟ್ಟರು. ಅವನು ಸುಸ್ತಾದ. ಭೂತಕನ್ನಡಿ ಹಾಕಿನೋಡಿ ಇನ್ನೂ ಸುಸ್ತಾದ. ಅವುಗಳಮೇಲೆ ವಿಭೂತಿ ಹಚ್ಚಿ ಉದುರಿಸಿ ನೋಡಿದಮೇಲೆ ಥಂಡಾದ.

ಒಬ್ಬನ ಬೆರಳ ಗುರ್ತಿನಂತೆ ಇನ್ನೊಬ್ಬನದೂ ಒಂದೇ ಊರಿನಲ್ಲಿ ಇರಬಹುದು ಎಂದು ನ್ಯಾಯಾಧೀಶನಿಗೆ ತಿಳಿದಾಗ —ಕೇಸ್ — ಡಿಸ್ಮಿಸ್.

—ಜಗ್ಗೋಜಿಯ ಮೊದಲ ಮಗ ಮುನ್ನೋಜಿ ಎಂಬುದನ್ನು ಯಾರೂ ತಿಳಿದಿರಲಿಲ್ಲ!

# ತಾತ್ಯಾಟೋಪಿಯ ದಂಗೆ

ಒಂದು ನೂರು ವರ್ಷಗಳ ಹಿಂದೆ ನಾನಾಸಾಹೇಬನ ದಂಗೆಯೆದ್ದಿತಲ್ಲ; ಬ್ರಿಟಿಷರು ಅದನ್ನು ಅಡಗಿಸಿದೆವೆಂದರಲ್ಲ; ಅದು ಸುಳ್ಳು ಮುಗಿಲುಹಳ್ಳಿಯಲ್ಲಿ ಆ ದಂಗೆ 1957 ಏಪ್ರಿಲ್‌ವರೆಗೂ ನಿಂತಿರಲಿಲ್ಲ. ಅವ್ಯಾಹತವಾಗಿ ಸಾಗಿಯೇ ಇತ್ತು. ಹಿಂದೂ ಮುಸಲ್ಮಾನ ಬಾಂಧವರೂ ಬೌದ್ಧ ಜೈನರೂ ಪಾರಸಿಕರೊ, ಕ್ರೈಸ್ತರೂ ಸಹಕರಿಸಿ ಆ ದಂಗೆಯನ್ನು ಯಶಸ್ವಿಯಾಗಿ ನಡೆಸುತ್ತಿದ್ದರು. ನಮ್ಮೂರಿನ ಸಿನ್ ಸಿನ್ಯಾಟಿ ಸರ್ಕಲಿನ ಪೋಲೀಸ ಕನಿಷ್ಟಬಿಲ್ಲೆ ನಮ್ಮೂರಿನ ದಂಗೆಯಿಂದ ಅವಿಚಲಿತನಾಗಿದಾನೆ. "ಈ ಊರಿನ ಜನ ಖುದಾನತಾವ ಹೊಂಟರ್ಬೇಕಾದ್ರೆ ನಾನ್ಯಾಕೆ ತಡೀಲಿ" ಎಂದವನು ಹೇಳುತ್ತಿದ್ದ. ಈ ದಂಗೆಯನ್ನಡಗಿಸಲು ತಾತ್ಯಾಟೋಪಿಯೇ ಬರಬೇಕಾಯಿತು.

ಮುಗಿಲುಹಳ್ಳಿಯಲ್ಲಿ ಜನರ ಹೇಷಾರವ, ಕಾಲಾಪಾನೀ ಉತ್ಸವ ವಿವಾರ ಮತ್ತತೆ, ವೀಥೀಪ್ರೇಮಗಳು ನಿಂತುಹೋಗಿವೆ. 'ಜೈ ಉಗ್ರ ವೀರಭದ್ರ' ಬಸ್ಸು ಕೂಡ ಓವರ್‌ಲೋಡ್ ಆಗುತ್ತಿಲ್ಲ. ಕಾರುಗಳು ಫುಟ್‌ಪಾತಿನಲ್ಲೂ, ಸೈಕಲುಗಳು ರೈಟ್ ಸೈಡಿನಲ್ಲೂ, ಲಾರಿಗಳು ಶಾರ್ದೂಲ ಗತಿಯಲ್ಲೂ ಹೋಗುತ್ತಿಲ್ಲ. ಹೋಗಬೇಕಾದಂತೆಯೇ ಕಾನೂನು ಪ್ರಕಾರ ಹೋಗುತ್ತಿವೆ.

ಬೆಂಗಳೂರಿನಿಂದ ಹಿಂತಿರುಗಿಬಂದ ನಾನು ಈ ಅದ್ಭುತವನ್ನು ನೋಡಿ 'ಏನ್ರೋ ಇದು. ಶಿಸ್ತೋ ಶಿಸ್ತು' ಎಂದು ಕೇಳಿದಾಗ, ನನ್ನ ಮಿತ್ರರು 'ತಾತ್ಯಾಟೋಪಿಯ ದಂಗೆ' ಎಂದರು.

ತಾತ್ಯಾಟೋಪಿ ನಮ್ಮೂರಿಗೆ ಬಂದು ನೆಲೆಸಿದ ಹೊಸ ಪೋಲೀಸ್ ಸಬ್ ಇನ್ಸ್‌ಪೆಕ್ಟರು. ಅವನು ಅರಿಯದ ರೂಲ್ಸಿಲ್ಲ. ಕೋರ್ಟಿಗೆ ಕಳಿಸದ ಜನಗಳಿಲ್ಲ. 'ತಾತ್ಯಾಟೋಪಿ ಬಂದ' ಎಂದರೆ ಸಾಕು 'ಜರಠಕಮಠ ಪಾಠೀನಚಯ ಕರಿಮಕರನಕ್ರ ಕೋಲಾಹಲಧ್ವಾನ' ಯುಕ್ತವಾದ ಮುಗಿಲುಹಳ್ಳಿಯ ಬೀದಿಗಳು 'ಬರಿದೋ ಬರಿದು' ಆಗಿವೆಯೋ ಎನ್ನುವಷ್ಟು ನಿಶ್ಶಬ್ದವಾಗಿಬಿಡುತ್ತವೆ. ಅವನು ಬರಬೇಕಾದ ಅವಶ್ಯಕತೆಯೇ ಇಲ್ಲ.

ಇಂತಹ ಅದ್ಭುತವನ್ನು ಸಾಧಿಸಿದ ಮಹನೀಯನನ್ನು ನೋಡಲೆಂದು ಬಸ್ ಸ್ಟಾಂಡಿಗೆ ಹೋದೆ. ಜಬ್ಬರ್ ಇರುತ್ತಾನೆ. ಕೇಳಿದರೆ ತೋರಿಸುತ್ತಾನೆ; ತಾತ್ಯಾಟೋಪಿಯನ್ನು ನೋಡುವಾ!

'ಕ್ಯಾ ಜಬ್ಬರ್‌ದಾ ? ತಾತ್ಯಾಟೋಪಿ ಕಿಧರ್‌ಹೈ?" ಎಂದೆ. 'ಟ್ರೈಂ ಹೋಗಯಾದಾ ಕಲ್‌ಫಜರ್ ದಿಖಾತಾ' ಎಂದವನು ಬಸ್ಸನ್ನು ಇಷ್ಟಾರ್ಟ್‌ಮಾಡಿಯೇ ಬಿಟ್ಟ. ಅವನ ಬಸ್ಸು ಇದುವರೆಗೂ ಮೂರು ಗಂಟೆಗಿಂತ ಕಡಿಮೆ ಲೇಟಾಗಿ ಹೊರಟ ದಿನವೇ ಇಲ್ಲ.

ಅಷ್ಟರಲ್ಲಿ ಶ್ರೀ ಕುಲಕರ್ಣಿ ಬಂದರು. ಹಲೋ ಎಂದೆ. ಅವರು ಉತ್ತರ ಕೊಡಲಿಲ್ಲ. ಬಂದು, ನನ್ನ ಕೈಕುಲುಕಿ 'ಇದೇನ್ರೀ ಇದರರ್ಥ' ಎಂದು ಒಂದು ಪತ್ರಿಕೆಯನ್ನು ಮುಖಕ್ಕೆ ಹಿಡಿದರು. ಅವರು ತೋರಿಸಿದುದು ನನ್ನ ಇತ್ತೀಚಿನ ಅಮರಕೃತಿ.

ನರಕದಲಿ ಊರ್ವಶೀ ವಿರಹ
ಪರಮಾಣುವಿಗೆ ಸೈಕ್ಲೊಟ್ರಾನಿನಲಿ ಸೌಖ್ಯ
ಕಲಿಗೆ ಕಂಬಶ್ಚನಿಂಟರ್ನಲ್
ಚುಚ್ಚೋ ನಳನಿಗೆ ಹೈಡ್ರೊಫೋಬಿಯಾ.

ನಾನು ಸಮಯಸ್ಫೂರ್ತಿಯಿಂದ 'ಕಾಫಿ ಕುಡಿಯೋಣ ಬನ್ನಿ ಸರ್' ಎಂದೆ. ಅವರು ನಗುತ್ತಾ 'ನವ್ಯಕವಿಗಳಿಗೆ ಖರ್ಚು ಬಹಳ' ಎಂದರು. ನಾನು 'ಕರ್ಮಕ್ಕೆ ತಕ್ಕ ಫಲ. ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ' ಎಂದೆ.

ಕುಲಕರ್ಣಿಯವರ ಪರಿಚಯ ಆದುದು ನಾನು ಬೆಂಗಳೂರಿಗೆ ಹೋದಾಗ. ಸಿಟಿಬಸ್ಸಿನಲ್ಲಿ ನಾವಿಬ್ಬರೂ ಅಕ್ಕಪಕ್ಕದಲ್ಲಿ ಕುಳಿತಿದ್ದೆವು. ಹೊರಗಡೆ ಕಾಮನಬಿಲ್ಲು ಮೂಡಿತ್ತು. ಈ ಮನಮೋಹಕ ದೃಶ್ಯವನ್ನು ನೋಡಿದ ನಮ್ಮ ಎದುರು ಸೀಟಿನ ಗೃಹಸ್ಥರಿಗೆ ಕೆರಳಿತು. ಅವರು ಎದ್ದು ನಿಂತು 'ಇಂದ್ರಧನು ಮೂಡಿತದೊ' ಎಂದು, ಮೂರು ಬಾರಿ ಕೆಮ್ಮಿ ಕೊಂಚ ನಡುಗಿ, ಎಚ್ಚರ ತಪ್ಪಿ ಕುಳಿತರು. ಅವರ ಪಕ್ಕದವ 'ಇವರು ರೊಮ್ಯಾಂಟಿಕ್ ಕವಿಗಳು. ಭಾವಸಮಾಧಿ ಬಂದಿದೆ' ಎಂದ. ನಾನು ಕವಿಯ ಹಣೆ ಮುಟ್ಟಿ 'ಇದು ಫ್ಲೂ' ಎಂದು ವಾದಿಸಿದೆ. ಪಕ್ಕದಲ್ಲಿದ್ದ ಕುಲಕರ್ಣಿ 'ನೀವು ನವ್ಯಕವಿಗಳೋ' ಎಂದರು. ನಾನು 'ಹೌದು' ಎಂದೆ. ಅದೆ ನಮ್ಮ ಪ್ರಥಮ ಪರಿಚಯ.

ಕಾಫಿ ಕುಡಿಯುತ್ತಾ ಕುಳಿತಾಗ ನಾನು 'ಇದೇನು ಸಾರ್ ಇಲ್ಲಿಗೆ ಎಂದು ಬಂದಿರಿ?' ಎಂದೆ.

'ನಿಮ್ಮೂರಿಗೆ ಬಂದು ಎರಡು ತಿಂಗಳಾಯ್ತು'

"ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ತಾತ್ಯಾಟೋಪಿ ಅಂತ ಸಬ್ ಇನ್ಸ್‌ಪೆಕ್ಟರು ಇದ್ದಾರಲ್ಲ ಅವರು ನಿಮ್ಮ ಸ್ನೇಹಿತರೋ?"

'ಹೌದು. ಏಕೆ?'

'ಅವರಿಗೆ ನನ್ನ ಅಭಿನಂದನೆಗಳನ್ನು ತಿಳಿಸಿ. ಅವರು ದಂಗೆ ಆರಂಭಿಸಿದಮೇಲೆ ನಮ್ಮೂರಿನ ದಂಗೆ ನಿಂತಿದೆ'

"ತಲುಪಿಸುತ್ತೇನೆ. ಅದನ್ನು ಸ್ವೀಕರಿಸುವ ರೂಲ್ಸಿದ್ದರೆ ಸ್ವೀಕರಿಸ್ತಾರೆ"

ರೂಲ್ಸ್! ಅದು ತಾತ್ಯಾಟೋಪಿಯ ಮೂಲಮಂತ್ರ. ಆದುದರಿಂದ ನಾವೂ ರೂಲ್ಸ್ ತಿಳಿದಿರುವುದು ಒಳ್ಳೆಯದು. ಯಾವ ರೂಲ್ಸಿನ ಪ್ರಕಾರ ನಾವು ಶಿಕ್ಷಾರ್ಹ ರಾಗುತ್ತಿರುವೆವೋ, ತಾತ್ಯಾಟೋಪಿಯನ್ನು ಬಿಟ್ಟರೆ ಇನ್ನಾರು ಬಲ್ಲರು. ಆದುದರಿಂದ ಪ್ಯಾಂಟ್ ಮಡಿಚಿ, ತಲೆಕೆದರಿ 'ಆವಾರಾಹೂಂ' ಎಂದು ಹಾಡುವುದಾಗಲೀ; ಫರ್ ಕ್ಯಾಪ್ ಹಾಕಿಕೊಂಡು 'ಮೇರಾನಾಂ ಅಬ್ದುಲ್‌ರಹಮಾನ್' ಎಂದಾಗಲೀ, ಕಾಲೇಜು ದಾರಿಯಲ್ಲಿ 'ಕೋಲೆಸಖೀ ಚಂದ್ರಮುಖೀ' ಎಂದಾಗಲೀ ಅರಿಚುವುದೂ ಒಳ್ಳೆಯದು ಅಲ್ಲ. ತಾತ್ಯಾಟೋಪಿ ನಮ್ಮಮೇಲೆ ಕೇಸ್ ಹಾಕಬಹುದು.

ತಾತ್ಯಾಟೋಪಿಯ ದಂಗೆ ಸ್ವೇಚ್ಛೆಯ ವಿರುದ್ಧದಂಗೆ, ಪೌರನೀತಿ ವಿಹೀನತೆಯ ವಿರುದ್ಧ ದಂಗೆ, ಆದುದರಿಂದ ನಾವೆಲ್ಲರೂ ತಾತ್ಯಾಟೋಪಿಯ ದಂಗೆಗೆ ಸೇರಬೇಕು.

ದಿನಕ್ಕೆ ಎರಡಾದರೂ ದಂಗೆ, ಅಪಘಾತ, ಬೀದಿಗಲಹ, ಮೆರವಣಿಗೆ, ನಡೆಯು ತ್ತಿದ್ದರೆ ಮುಗಿಲುಹಳ್ಳಿಗೆ ಕಳೆ. ಆದುದರಿಂದ ತಾತ್ಯಾಟೋಪಿ ಮಾಮೂಲಿ ತೆಗೆದು ಕೊಂಡು ಅದಕ್ಕೆ ಅವಕಾಶಕೊಡಬಾರದೇಕೆ ಎಂದು ಕೆಲವರು ವಾದಿಸುತ್ತಾರೆ. ಉಹೂಂ. ಲಂಚ ಮುಷವತ್ತು ತೆಗೆದುಕೊಳ್ಳುವುದು ಅವನ ಹಣೆಯಲ್ಲೇ ಬರೆದಿಲ್ಲ. ಶುದ್ಧ ದಡ್ಡ. ಅವನು ಬಂದಮೇಲೆ ನಮ್ಮೂರಿನ ಕಳೆ ಹೋಗಿಬಿಟ್ಟಿದೆ.

ಕುಲಕರ್ಣಿಯವರು ಇದನ್ನು ಕೇಳಿ ನಕ್ಕರು. ತಾತ್ಯಾಟೋಪಿಯ ದೆಸೆಯಿಂದ ಒಂದು ಅಪಘಾತ ನಡೆದಿದೆಯೆಂದು ತಿಳಿಸಿ ಆ ಕತೆ ಹೇಳಿದರು.

ತಾತ್ಯಾಟೋಪಿ ಸಿಟಿಯ ಟೋಲ್‌ಗೇಟಿನ ಬಳಿ ನಿಂತಿದ್ದನಂತೆ. ಬೆಂಗಳೂರಿ ನಿಂದ ಮುಗಿಲುಹಳ್ಳಿಗೆ ಬರುತ್ತಿದ್ದ ಲಾರಿಯ ಎಂಜಿನಿಗೆ ಈ ಸುದ್ದಿ ತಿಳಿಯಿತಂತೆ. ಆ ಎಂಜಿನ್, ಟೋಲ್‌ಗೇಟಿಗೆ ಒಂದುಮೈಲಿ ದೂರವಿರುವ ರೈಲ್ವೆಗೇಟಿನ ಬಳಿ ಸತ್ಯಾಗ್ರಹ ಹೂಡಿ ನಿಂತುಬಿಟ್ಟಿತಂತೆ. ಡ್ರೈವರ್ ಪ್ಯಾರೆಜಾನ್ ಸತ್ಯಾಗ್ರಹದಲ್ಲಿ ನಂಬಿಕೆಯುಳ್ಳವನಲ್ಲ.

ಅವನು ಎಂಜಿನಿಗೆ ಹೇಳಿದ—"ಚಲೋ ಮೇರಿ ಪ್ಯಾರೀ"

ಎಂಜಿನು ನಿರ್ಭಯದಿಂದ ಉತ್ತರಿಸಿತು—"ಅಲ್ಲವೋ ಪ್ಯಾರೆಜಾನ್. ನಿನಗೆ ಲೈಸನ್ಸೇ ಇಲ್ಲವಲ್ಲ?"

"ನೈತೊಕ್ಯಾ? ಜಾಫರ್‌ಸಾಬಿ ಲೈಸನ್ಸು ಐತಲ್ಲಾ?"

“ಜಾಫರ್ ಲೈಸನ್ಸು ಐತೆ. ಆದ್ರೆ ಓವರ್‌ಲೋಡ್ ಐತಲ್ಲಾ? ಬ್ರೇಕು ಸರಿ ಇಲ್ವಲ್ಲಾ”

“ಅದ್ನೆಲ್ಲಾ ನೋಡಹಂಗಿಲ್ಲ ಪ್ಯಾರೀ, ಆಸ್ಮಾನ್‌ಗಾಂವ್ ಮುಟ್ಬಡ್ಬೇಕು ಅರ್ಧ ತಾಸಿನೊಳ್ಗೆ”

“ಅರ್ರೇ ಬೇಕೂಫ್ ಟೋಲ್ಗೇಟ್ನಾಗೆ ತಾತ್ಯಾಟೋಪಿ ಐದಾನೆ. ಕೋರ್ಟ್‌ಗೆಳ್ದು ಮೂರ್ತಿಂಗ್ಳು ಸಸ್ಪೆಂಡ್ ಜಡ್ದಾ ಅಂದ್ರೆ ನೊಡ್ಬೆಂತೆ ಆಸ್ಮ್ರಾನ್‌ಗಾವಿಗೆ ಹೋಗೋದು”

“ಡರೋಮತ್ ಪ್ಯಾರೀ. ಅಡ್ಡದಾರ್ಯಾಗೆ ರೈಲ್ವೆಲೈನು ಕ್ರಾಸ್ಮಾಡಿ ನೆಟ್ಗೆ ಪ್ಯಾಟೆ ಒಳ್ಗೆ ಹೋಗಿಬಿಡನ”

ನಂತರ ಆ ಸತ್ಯಸಂಧ ತೈಲಶಕಟವು, ಚೋರಮಾರ್ಗದಲ್ಲಿ ಲೋಹನಿರ್ಮಿತ ಪಥವನ್ನುತ್ತರಿಸಲು ಉದ್ಯಮಿಸಿತು. ಆದರೆ ಅದೇ ಸಮಯಕ್ಕೆ ಅಲ್ಲಿಗೆ ಬಂದ ಎಕ್ಸ್‌ಪ್ರೆಸ್‌ಗಾಡಿಯು ಪ್ಯಾರಿಯ ಕೈಕುಲುಕಿದುದರಿಂದ ಪ್ಯಾರೇಜಾನನೂ, ಪ್ಯಾರಿಯೂ ತೀವ್ರಗಾಯಗಳಿಗೆ ತುತ್ತಾಗಿ ಆಸ್ಪತ್ರೆಗೆ ತೆರಳಿದರು.

ಅದೇ ಸಂಜೆ, ‘The Man who knew too much’ ನೋಡಲೆಂದು ಥಿಯೇಟರ್ ಜಿಬ್ರಾಲ್ಟರಿಗೆ ಹೋದೆ. ಒಳಗೆ ಕಾಲಿಟ್ಟಾಗ ಮೊದಲು ಕಂಡವರು ಕುಲಕರ್ಣಿ. ಹೋಗಿ ಅವರ ಪಕ್ಕದಲ್ಲೇ ಕುಳಿತೆ. ಹೊರಗೆ ಮಳೆ. ಮೇಲೆ ಫ್ಯಾನ್. ಅಸಾಧ್ಯ ಛಳಿ. ಹಾಗಿದ್ದರೂ ಥಿಯೇಟರಿನಲ್ಲಿದ್ದ ಯಾರೂ ಬೀಡಿ ವಗೈರೆ ಸೇದುತ್ತಿರಲಿಲ್ಲ. ಇದೇನಿದು. wonder of wonders! ಮುಗಿಲುಹಳ್ಳಿಯ ಥೇಟರಿನಲ್ಲಿ ಬೀಡಿ ಸೇದುವವರಿಲ್ಲ! ಸ್ಮೋಕಿಂಗ್ ಪ್ರಾಹಿಬಿಷನ್ ಆಕ್ಟು ಮುಗಿಲುಹಳ್ಳಿಗೆ ಅನ್ವಯಿಸಿ ಎಷ್ಟೋ ವರ್ಷಗಳಾಗಿವೆ. ಆದರೂ ನಮ್ಮೂರಿನ ಸತ್ಸಂಪ್ರದಾಯವನ್ನನುಸರಿಸಿ ಅವ್ಯಾಹತ ಧೂಮಪಾನ ನಡೆದೇ ಇತ್ತು. ಆದರೆ ಇಂದು?

ಎದ್ದು ಗೇಟ್‌ಕೀಪರ್ ಬಳಿಗೆ ಹೋದೆ ‘ಏನಯ್ಯ. ಬೀಡೀ ಸೇದೋರೆಲ್ಲ ನೆಗ್ದುಬಿದ್ದರೇ?’ ಎಂದು ಕೇಳಿದೆ.

‘ತಾತ್ಯಾಟೋಪಿ ಭಯ ಸ್ವಾಮಿ’ ಎಂದ ಅವನು. ನನಗೆ ರೇಗಿಹೋಯ್ತು. ಛೀ! ಮುಗಿಲುಹಳ್ಳಿಯವರೆಲ್ಲ ಹುಳುಗಳೇ. ತಾತ್ಯಾಟೋಪಿಗೆ ಹೆದರುವಷ್ಟು ಹೆದರಲಿ. ಆ ದೊಣೆನಾಯಕನಿಗೆ ಹೆದರಿ ಹೊಳೆ ನೀರಿಗೂ ತಿಲಾಂಜಲಿಯೇ. ಸಿಟ್ಟಿನಿಂದ ಕುಲಕರ್ಣಿಯವರಿಗೆ ಹೇಳಲಾರಂಭಿಸಿದೆ.

“ನೋಡಿ ಮಿ ಕುಲ್ಕರ್ಣಿ, ತಾತ್ಯಾಟೋಪಿ ನನ್ನ ವೈಯಕ್ತಿಕ ಹಕ್ಕುಗಳ ಧಾಳಿ ನಡೆಸಿದಾನೆ. ಮುಗಿಲುಹಳ್ಳಿಯ ಭವ್ಯಸಂಪ್ರದಾಯದಂತೆ ಸಿಗರೇಟು ಸೇದಲು

ನನಗೆ ಹಕ್ಕು ಇದೆ. ಅದನ್ನು ತಾತ್ಯಾಟೋಪಿಗೆ ತೋರಿಸಿಯೇಬಿಡ್ತೇನೆ. ನೀವು ನನ್ನ ಜೊತೇಲಿ ಇದೀರಿ. ತಾತ್ಯಾಟೋಪಿ ನನ್ನ ಹೇಗೆ ಅರೆಸ್ಟ್‌ಮಾಡ್ತಾನೋ ನೋಡೇ ಬಿಡೋಣ. with your kind permission" ಎಂದು ಸಿಗರೇಟು ಹತ್ತಿಸಿಯೇಬಿಟ್ಟೆ.

ಸಿನಿಮಾ ಆರಂಭವಾಯ್ತು. ಆದ ಎರಡು ನಿಮಿಷದಲ್ಲೇ ನನ್ನ ಅರೆಸ್ಟೂ ಆಯ್ತು. 'ಕುಲ್ಕರ್ಣಿ ಪರ್ಮಿಷನ್ ಕೊಟ್ಟಿದಾರಯ್ಯ' ಎಂದರೂ ಕಾನ್ಸ್‌ಟೇಬಲ್ ಕೇಳಲಿಲ್ಲ. ಕುಲಕರ್ಣಿ ಮಾಯವಾಗಿದ್ದರು. 'ತಾತ್ಯಾಟೋಪಿಯವರು ಹೇಳಿದಾರೆ ಸ್ವಾಮಿ' ಎಂದು ಆ ಕನಿಷ್ಠಬಿಲ್ಲೆ ನನ್ನನ್ನು ಎಳೆದುಕೊಂಡು 6-40 ಗಂಟೆಗೆ ಸರಿಯಾಗಿ ಸ್ಟೇಷನಿಗೆ ಕರೆದೊಯ್ದೇಬಿಟ್ಟ.

ಸ್ವಾತಂತ್ರ್ಯಯೋಧನಾಗಿ ಅನೇಕಬಾರಿ ಪೋಲೀಸ್‌ಸ್ಟೇಶನ್ ಕಂಡಿದೇನೆ. ಆದರೆ ಅಪರಾಧಿಯಾಗಿ ಹೋದುದು ಆಗಲೇ. ಮಾಮೂಲು ಕೊಡಲು ಹೋದೆ. ಕನಿಷ್ಠಬಿಲ್ಲೆ ತೆಗೆದುಕೊಳ್ಳಲಿಲ್ಲ. ಯಮದೂತರೂ ತಾತ್ಯಾಟೋಪಿಯ ದೂತರೂ ಲಂಚಕ್ಕೆ ಕೈಯೊಡ್ಡುವುದಿಲ್ಲ.

ಪೋಲೀಸ್‌ಸ್ಟೇಷನ್ ಕಚೇರಿಯಲ್ಲಿ ಕುಲಕರ್ಣಿ ಕುಳಿತಿದ್ದವರು ನನ್ನನ್ನು ನೋಡಿ ನಕ್ಕರು.

"ಹಲೋ ಮಿ. ಕುಲ್ಕರ್ಣಿ ನನ್ನ ಕಾಪಾಡಿ. ತಾತ್ಯಾಟೋಪಿ ನನ್ನ ಹಿಡಿದು ಬಿಟ್ಟ. ಅವನ ವಿರುದ್ಧ ನಾನೆದ್ದ ದಂಗೆ ವಿಫಲವಾಯ್ತು. ನೀವೂ ಕೈಕೊಟ್ಟಿರಿ. ನೀವಿದ್ದಿದ್ದರೆ ಅವನಿಗೆ ಅರೆಸ್ಟ್‌ಮಾಡಿಸುವ ಧೈರ್ಯ ಬರ್‍ತಿರ್‍ಲಿಲ್ಲ. ಈಗಲಾದ್ರೂ ನೀವು ಶಿಫಾರಸು ಹೇಳಿದ್ರೆ ನಾನು ಕೋರ್ಟಿಗೆ ಹೋಗುವ ಅವಶ್ಯಕತೆ ಬರುವುದಿಲ್ಲ. ನಾನು ನವ್ಯಕವಿ ಅಂತ ತಾತ್ಯಾಟೋಪಿಗೆ ಹೇಳಿರಿ. ಕನ್ನಡ ಕಾವ್ಯದ ಭವಿಷ್ಯ ನನ್ನನ್ನೇ ಅವಲಂಬಿಸಿದೆ ಅಂತ ಹೇಳ್ರಿ. ನನಗೆ ಹೆಂಡ್ರಿಲ್ಲ, ಮಕ್ಳಿಲ್ಲ ಅನ್ನೋದು ತಿಳಿಸಿ. ಬ್ರಹ್ಮಚಾರಿಗೆ ಫೈನ್ ಹಾಕ್ಸಿದ್ರೆ ಪಾಪ ಬರುತ್ತೆ ಅಂತ ಬೆದರ್‍ಕೆ ತೋರ್‍ಸಿ, ಸಾರ್! ನಿಮ್ಮನ್ನೇ ನಂಬಿದೀನಿ. ನನ್ನ ಭವಿಷ್ಯ ನಿಮ್ಮನ್ನೇ ಅವಲಂಬಿಸಿದೆ."

ನನ್ನ ಮಾತು ಕೇಳಿ ಕುಲಕರ್ಣಿ ನಸುನಕ್ಕರು.

"ತಾತ್ಯಾಟೋಪಿ ಕಂಡವರ ರೆಕಮೆಂಡೇಷನ್ ಕೇಳುವುದಿಲ್ಲ. ಆದರೂ ಕೂಡ, ನಿಮಗಾಗಿ ಶಿಫಾರ್‍ಸು ಹೇಳ್ತೀನಿ. But on one condition. ನಿಮ್ಮ 'ನರಕದ ಊರ್ವಶಿ' ಚತುಷ್ಪದಿಯ ಅರ್ಥವನ್ನು ನೀವು ವಿಶದವಾಗಿ ತಿಳಿಸಬೇಕು. ಅದರರ್ಥ ತಿಳಿಯದೆ ನನಗೆ ಮೂರು ದಿನದಿಂದ ನಿದ್ದೆಬಂದಿಲ್ಲ"

"ಇದು ನ್ಯಾಯವೇ ಸರ್? ತನ್ನ ಅಂತರಂಗವನ್ನು ತಾನು ತಿಳಿದು ಇತರರಿಗೆ ತಿಳಿಸಿದರೆ ಕವಿಗೆ ಮರ್ಯಾದೆ ಬಂದೀತೇ?"

“ಅದೆಲ್ಲಾ ಗೊತ್ತಿಲ್ಲ. ಅರ್ಥಕ್ಕೆ ಆರಂಭಿಸಿ”

ಅಷ್ಟುಹೊತ್ತಿಗೆ ಕುಲಕರ್ಣಿಯವರಿಗೆ ಎಕ್ಸ್‌ಪ್ರೆಸ್ ಡೆಲಿವರಿ ಕವರ್ ಒಂದು ಬಂದಿತು. ಅದನ್ನು ಅವರು ಅವಸರದಿಂದ ಜೇಬಿಗೆ ಸೇರಿಸಿದರು. ಆದರೂ ಅದರ ಮೇಲಿನ ವಿಳಾಸ ನನಗೆ ಕಂಡಿತು. Tatya Topya Kulkarni.

“ಇಲ್ನೋಡಿ ಸರ್ ನರಕದಲ್ಲಿ ಊರ್ವಶಿಯ ವಿರಹವು ಕೇವಲ ವಿಡಂಬನಾತ್ಮಕವೂ, ಪ್ರತಿಮಾಪೂರ್ಣವಾಗಿಯೂ........” ಎಂದು ಆರಂಭಿಸಿದೆ “ಕ್ಷಮಿಸೆನ್ನ ನೆಲೆ ತಂದೆ ನಾನೇನ ಬರೆಯುತಿಹೆನೆಂದರಿಯೆ ನಾನು” ಎಂದು ಆ ಖುದಾನನ್ನು ಮೌನದಿಂದ ಪ್ರಾರ್ಥಿಸಿದೆ.

— ಅ. ರಾ. ಸೇ.

---

ನವ್ಯನಾಟಕಕರರು “ಸೈರಂಧ್ರೀ ಪರಿಣಯ” ಎಂಬ ನಾಟಕವನ್ನು ಓಲೆಗರಿಯಲ್ಲಿ ಬರೆದಿದ್ದಾರಂತೆ.

* * *

ಅಮೃತಮಹಲನ್ನು ಬೀಡಿ ವ್ಯಾಪಾರಿಯೊಬ್ಬನು ಕೊಂಡನಂತೆ!!

—ಬಲು ಅರ್ಥ ಗರ್ಭಿತ ಅಲ್ಲವೆ.

* * *

ಕೊಡಗಿನವರು ಮದುವೆಯಾಗುವ ಮುನ್ನ ಬಾಳೆಕಂಭವನ್ನು ಕತ್ತರಿಸಬೇಕಂತೆ; ನಂತರ ಹೆಣ್ಣನ್ನು ಒಯ್ಯಬೇಕಂತೆ.

—ಕಲಿಗಾಲ ಅಲ್ಲವೇ ಈಗ.

* * *

# ಬುದ್ಯೋರು ಬೇಸ್ತು ಬಿದ್ದದ್ದು!

"ಏನ್ಮಾಡ್ತಿದೀಯ ತಿಮ್ಮ?"

"ಕುಂತ್ಕೊಂಡಿದೀನಿ ಬುದ್ಧಿ!"

"ಕೆಲ್ಸಕ್ಸೇರೋ ತಿಮ್ಮ"

"ಯಾತಕ್ ಕೆಲ್ಸಾ ಬುದ್ಧಿ?"

"ಸಂಬ್ಳಾ ಸಿಗ್ತೈತಲ್ಲೊ!"

"ಸಂಬ್ಳಾ ಯಾತಕ್ ಬುದ್ಧಿ?"

"ಬ್ಯಾಂಕ್‌ನಾಗಿಡೋಕೆ ಬೆಪ್ಪೆ!"

"ಬ್ಯಾಂಕ್‌ನಲ್ ಯಾತಕ್ ಬುದ್ಧಿ?"

"ಬ್ಯಾಂಕ್‌ನಲ್ ದುಡ್ಡಿತ್ತೊಂದ್ರೆ...."

"....ಊಂ....ದುಡ್ಡಿತ್ತೊಂದ್ರೆ"

"ಕುಂತಿರಬ್ಹೈದು ತಿಮ್ಮ!"

"ಕುಂತಿವ್ನಲ್ಲ ಬುದ್ಧಿ!"

"ದುಡಿಯೋದ್ ತಪ್ತೈತ್ ಕತ್ತೆ!"

"ನಾನ್ದುಡಿತಿದೀನಾ ಮತ್ತೆ?"

[ಅಮೇರಿಕದ Hearst ಮಹಾಶಯ ಇದೇ ರೀತಿ ಬೇಸ್ತುಬಿದ್ದನಂತೆ ಒಬ್ಬ ರೆಡ್ ಇಂಡಿಯನ್ ಕೈಯಲ್ಲಿ!]

— ರಾಮಿ.

# “ಕೇಳಿದ್ದೀರಾ!”

---

“ಜ್ಯೇಷ್ಠ ಬಹುಳ ಅಮಾವಾಸ್ಯೆ ರಾತ್ರಿ ೯ ಗಂಟೆಗೆ ಸರಿಯಾಗಿ ಮಡಿಯಲ್ಲಿ ಕುಳಿತು, ಸಣ್ಣದೊಂದು ಎಳೆನಿಂಬೆಕಾಯಿ ರಸವನ್ನು ಒಂದು ಕುಡಿಕೆಗೆ ಹಿಂಡಿ, ಸಣ್ಣ ಅಡಿಕೆಚೂರಿನಷ್ಟು ದಾಲ್ಚಿನ್ನಿಯನ್ನು ಒಂದು ಉದ್ಧರಣೆ ನೀರಿನಲ್ಲಿ, ಕಲ್ಪತ್ತಿನಲ್ಲಿ ಅರೆದು, ಅದನ್ನು ಕುಡಿಕೆಗೆ ಹಾಕಿ, ಒಂದು ಎಸಳು ಕರಿಬೇವಿನಸೊಪ್ಪನ್ನು ಆ ಕುಡಿಕೆಗೆ ಸೇರಿಸಿ, ಕುಡಿಕೆ ಬಾಯಿಕಟ್ಟಿ, ರಾತ್ರಿಯೆಲ್ಲಾ ಅದನ್ನು ದೇವರ ಪಟದ ಕೆಳಗೆ ಇರಿಸಿರುವುದು. ಆಷಾಢ ಪಾಡ್ಯದ ಬೆಳಿಗ್ಗೆ ಎದ್ದು ಒಂದು ತುಣುಕು ಬೆಳ್ಳುಳ್ಳಿ, ಒಂದು ಹರಳು ಇಂಗು ಇವನ್ನು ಕುಡಿಕೆಗೆ ಹಾಕುವುದು ಮಧ್ಯಾಹ್ನ ಒಂದು ಸೌಟು ಹುಳಿಮಜ್ಜಿಗೆ ಇದಕ್ಕೆ ಸೇರಿಸಿ ದೊಡ್ಡ ಮಡಿಕೆಗೆ ಈ ಕಷಾಯವನ್ನು ಹಾಕಿ, ಮಡಿಕೆಯನ್ನು ಅಡಿಗೆಮನೆಯಲ್ಲಿ ಇರಿಸಬೇಕು. ಪಾಡ್ಯದ ರಾತ್ರಿ ೮ ಗಂಟೆಗೆ ಈ ಕಷಾಯವನ್ನು ಕಂಠ ಪೂರ್ತ ಕುಡಿದು, ಉಂಡು ಮಲಗಿದರೆ ಒಂದು ವರ್ಷಕಾಲ ಯಾವ ತೆರನಾದ Flu ಕಾಯಿಲೆಯೂ ಬರುವುದಿಲ್ಲ” ಎಂದು ನಮ್ಮನೆಯಲ್ಲಿರುವ ವಾಲೆಗರಿ ಪುಸ್ತಕದಲ್ಲಿ ಹೇಳಿದೆ ಎಂದು ಶ್ಯಾನುಭೋಗ ಶಾಮಣ್ಣ, ಪಟೇಲ್ ಪಾಪಣ್ಣನಿಗೆ, ರಾಜೀವಪುರದ, ಕೊರಕಲಾಚೆ ಹಳ್ಳಿಯ ಪಂಚಾಯ್ತಿ ಹಾಲಿನಲ್ಲಿ, ಚತುರ್ದಶಿ ಸಾಯಂಕಾಲ ಪತ್ರಿಕೆ ಓದುತ್ತಿದ್ದಾಗ ಹೇಳಿದ.

ಪತ್ರಿಕೆಯನ್ನು ಓದಿಯೇ ಬೆದರಿ ಬೆಚ್ಚುತ್ತಿದ್ದ ಪಾಪಣ್ಣ ಬೇಗ ಮನೆಗೆ ಹೋಗಿ ‘ಈ’ ಪ್ರಯೋಗವನ್ನು ಕೈಕೊಂಡ. ಏಕೆಂದರೆ ಮುಂದಿನವಾರ ಅವನು ತಾನು ಓಟು ಕೊಟ್ಟವನೊಂದಿಗೆ, ಬೆಂಗಳೂರಿಗೆ ಹೋಗಿ ಸರ್ಕಾರದ ಕೆಲಸವನ್ನೂ ಸ್ವಂತ ಕೆಲಸವನ್ನೂ ಮಾಡಬೇಕಾಗಿತ್ತು. ಪತ್ರಿಕೆಗಳಲ್ಲಿ ಪ್ರಚುರಪಡಿಸಿದ Flu ಬಂದೇಬಿಟ್ಟರೆ! ಗತಿ ಏನು ಎಂಬ ಭಯ. ಆ ಕಾರಣದಿಂದಲೇ ಪಟೇಲ್ ಪಾಪಣ್ಣ ಈ ಮುಂಜಾಗ್ರತಾ ಕ್ರಮಕ್ಕೆ ಕೈಹಾಕಿದ್ದು!

ಪಾಡ್ಯದ ರಾತ್ರಿ ೮ ಗಂಟೆಗೆ ಪಟೇಲ್ ಪಾಪಣ್ಣ ಕಷಾಯವನ್ನು ಕುಡಿದ. ಕುಡಿದು ಬಿಕ್ಕಳಿಸಿದ. ಬಿಕ್ಕಳಿಸಿ “ಎಡೆ ಇಕ್ಕು” ಎಂದ. ಎಡೆ ಇಕ್ಕಿದಾಗ, ಮುದ್ದೆಯನ್ನು ಎಸರಿನಲ್ಲದ್ದಿ ನುಂಗಿದ. ಹೊಟ್ಟೆ ತುಂಬಾ ನುಂಗಿ ತೇಗಿದ. ಭರ್ಜರಿ ತೇಗೊಂದನ್ನು ತೇಗಿದಾಗ, ಹೊರಹೊಮ್ಮಿದ ಕೊಕ್ಕೋಕೋ ಶಬ್ದ ಅಂಗಳವನ್ನೆಲ್ಲಾ ತುಂಬಿತು. ಎಸರಿನಲ್ಲಿದ್ದ ಹಾರುವ ತರಕಾರಿ ಬದುಕಿಯೇ ಇತ್ತೇನೋ ಎಂಬ ಸಂಶಯ ಕೂಡ ಅಂಗಳದಲ್ಲಿ ತುಂಬಿತು.

ಪಟೇಲ್ ಪಾಪಣ್ಣ ತೇಗಿದಮೇಲೆ ವಾಲಿಜ. ಮನೆಯಾಕೆ ದಿಂಬನ್ನು ತಂದಿಟ್ಟಳು ತಲೆಯ ಹತ್ತಿರ. ಅದರಮೇಲೇ ಒರಗಿದ ಪಾಪಣ್ಣ. ಅರ್ಧ ನಿಮಿಷದಲ್ಲೇ ಗೊರಕೆಗೆ ಶುರುವಾಯ್ತು

ಹೊ ಯ್ಯೋ....ಹೊ....ಯ್ಯೋ....ಮಳಿ....ರಾಯಾ! ಎನ್ನುವ ಧಾಟಿಯಲ್ಲಿ ಶುರುವಾದ ಗೊರಕೆ; "ಬಯ್ಯೋಬಡಿಯೋಮಾರಾಯ" ಎನ್ನುವ ತೀವ್ರ ಗಮನ ದಲ್ಲಿ ನಡೆದು, ಕಡೆಗೆ ಎಲೆಕ್ಷನ್‌ಕಾಲದ ಮೋಟಾರಿನ ಟೈರಿನಂತೆ ಉಶ್ಷ್ ಎಂದು ಶಬ್ದಮಾಡಿ, ತದನಂತರ ನಿಶ್ಶಬ್ದವಾಯ್ತು ಒಂದೆರಡು ನಿಮಿಷಕಾಲ.

ಕನಸಿನ ಲೋಕವೇ ಬಲು ಚೆಂದ! ಆಶೆಪಟ್ಟದ್ದೆಲ್ಲಾ ಆಗಿಯೇಬಿಟ್ಟರೆ, ಮುಂದಿನ ಜೀವನವೆಲ್ಲಾ ನಿರಾಶೆಯಿಂದಲೇ ತುಂಬಿರುತ್ತದೆ. ಅದಕ್ಕೇ ಆಶೆಗಳಲ್ಲಿ ಕೆಲವಾದರೂ ಕನಸಿನಲ್ಲಿ ಮಾತ್ರ ಸಾರ್ಥಕಗೊಳ್ಳುತ್ತವೆ. ಅತಿಮಿತಿ ಇಲ್ಲದ ಆಶೆಗಳಿಗೆ ಅಡ್ಡಿ ಆತಂಕಗಳಿಲ್ಲದ ಕನಸುಗಳೇ ಫಲವತ್ತರವಾದ ಕ್ಷೇತ್ರ. ಅದಕ್ಕಾಗಿಯೇ ಹಸಿದವ ನಿಗೆ ಹಬ್ಬದೂಟದ ಕನಸುಗಳು; ಹಸಿವಿಂಗುವಷ್ಟು ತಿಂದವನಿಗೆ ಸೊಬಗಿನ ಜೀವನದ ಕನಸುಗಳು; ಚಪಲದಿಂದ ಮಿತಿಮಿರಿ ಹೊಟ್ಟೆ ಬಿರಿಯ ಉಂಡವನಿಗೆ ನರಕದ ಕನಸುಗಳೇ ಸಿದ್ಧ!

ಆಷಾಢ ಪಾಡ್ಯದ ರಾತ್ರಿ ಪಟೇಲ್ ಪಾಪಣ್ಣ ಹೊಟ್ಟೆ ಬಿರಿಯ ತಿಂದಿದ್ದ. ಅವನು ಕಂಡ ಕನಸು ನರಕದ ಕನಸೇ ಆಗಿತ್ತು.

— ಕ ನ ಸಿ ನ ಲ್ಲಿ —

ಪಟೇಲ್ ಪಾಪಣ್ಣ ಕಾರ್ಯವಾಸಿಯಾಗಿ ಅಧಿಕಾರಿಗಳ ಕಾಲು ಹಿಡಿಯಲು ಬೆಂಗಳೂರಿಗೆ ಬಂದಿದ್ದಾನೆ.

ರಾಜೀವಪುರದ ನಾಯಕರ ಶಿಫಾರ್ಸಿನಿಂದ, ಸೊಸೈಟಿಗಳ ಹಿರಿಯ ಅಧಿ ಕಾರಿಯು, ಕೊರಕ್ಲಾಚೆ ಹಳ್ಳಿಯಲ್ಲಿ ಇನ್ನುಮುಂದೆ, ಇಷ್ಟರಲ್ಲೇ ಸ್ಥಾಪಿಸಲಾಗುವ ಸೊಸೈಟಿಗೆ ಐದು ಸಾವಿರ ರೂಪಾಯಿ ಮುಂಗಡ ಸಾಲವನ್ನು ಕೊಡಲು ಹುಕುಂ ಹೊರಡಿಸಿದ್ದಾನೆ. ಕಿವಿಯಿಂದ ಕಿವಿಯತನಕ, ನಗುವನ್ನು ತುಟಿಗಳಮೇಲೆ ಹರಡಿ ಕೊಂಡು ಪಟೇಲ್ ಪಾಪಣ್ಣ, ಅಧಿಕಾರಿಗಳ ಕೊಠಡಿಯಿಂದ, ಕಾರಖೂನರ ಕೊಠಡಿಗೆ ಹುಕುಂ ಪ್ರತಿಯನ್ನು ತೆಗೆದುಕೊಂಡು ಬಂದಿದ್ದಾನೆ. ಮೊದಲನೇ ಕಾರ್‍ಯಖೂನ 'ಹುಕುಂ' ಅನ್ನು ನೋಡಿ "ಪರವಾಗಿಲ್ಲ ಪಟೇಲರೇ! ಹುಲಿ ಷಿಕಾರಿ ಚೆನ್ನಾಗಿ ಮಾಡುತ್ತೀರಿ, ಅದರೆ ನರಿ ಷಿಕಾರೀನೂ ಕಲಿತುಕೊಳ್ಳಬೇಕು; ಇಲ್ಲದಿದ್ದರೆ ಹುಲಿ ಷಿಕಾರಿಮಾಡಿದ್ದೆಲ್ಲಾ ನರಿಗಳ ಪಾಲೇ ಅಲ್ಲವೇ!" ಎನ್ನುತ್ತಾನೆ ಪಟೇಲ್ ಪಾಪಣ್ಣ ಏನೂ ಅರಿಯದವನಂತೆ "ನೀವು ಏನಂತೀರೋ ತಿಳಿಯುಲ್ಲವಲ್ಲಾ ನನ್ನೊಡೆಯಾ!"

ಎನ್ನುತ್ತಾನೆ. "ಹಾಗೋ! ಹಾಗಾದರೆ ಈ 'ಹುಕುಂ' ಮೂರನೆಯ ಕಾರ್ಯಖೂನನಿಗೆ ಸಂಬಂಧಿಸಿದ್ದು. ಆತ 'Flu' ಅಂತ ಅರೆಮಾಸ ರಜೆ ಪಡೆದು ಆಸ್ಪತ್ರೆಮನೆಗೆ ಹೋಗಿದ್ದಾನೆ. ಮುಂದಿನ ತಿಂಗಳು ಬನ್ನಿ" ಎಂದು ಮೊದಲ ಕಾರ್ಯಖೂನ ಸುಲಲಿತ ವಾಗಿ ತಿಳಿಯುವಂತೆ ಕಾರ್ಯಕ್ರಮವನ್ನು ಹೇಳುತ್ತಾನೆ.

ಹಾಗೇನ್ರೀ! ಎಂದು ರೇಗಿ ಪಟೇಲ್ ಪಾಪಣ್ಣ ಮರಳಿ ಅಧಿಕಾರಿಯ ಬಳಿಗೆ ಹೋದಾಗ, ಆತ ಎಲ್ಲವನ್ನೂ ವಿಚಾರಿಸಿ, "ಪಟೇಲರೇ! ಮುಂದಿನ ತಿಂಗಳು ಬನ್ನಿ ನಿಮ್ಮ ಕೆಲಸ ಸಾಂಗವಾಗುತ್ತದೆ. ಆದರೂ ದೇವರು ವರ ಕೊಟ್ಟರೂ ಕೂಡ, ದೇವಸ್ಥಾನದ ಬಾಗಿಲು ತೆರೆಯಬೇಕಾದರೆ ಕೀಲುಗಳಿಗೆ ಎಣ್ಣೆಯನ್ನೋ ಬೆಣ್ಣೆಯನ್ನೋ ಹಚ್ಚಬೇಕು ಅದನ್ನು ತಿಳಿದುಕೊಳ್ಳುವುದು ಚೆನ್ನು" ಎನ್ನುತ್ತಾನೆ.

ದೇವರು ವರ ಕೊಟ್ಟರೂ, ಪೂಜಾರಿಯೇ ಕಾರ್ಯಕರ್ತನಲ್ಲವೇ!

ಪಟೇಲ್ ಪಾಪಣ್ಣ ಆಮೇಲೆ ವಿದ್ಯುಚ್ಛಕ್ತಿ ಇಲಾಖೆಯ ನಾಯಕರನ್ನು ಭೇಟಿ ಯಾಗುತ್ತಾನೆ. ಹೇಗಾದರೂ ಮಾಡಿ ಕೊರಕ್ಲಾಚಿ ಹಳ್ಳಿಯಲ್ಲಿ, ತನ್ನ ಮನೆಯ ಅಂಗಳದಲ್ಲಿ ಒಂದು ಹಿಟ್ಟಿನ ಮಿಷೀನ್ ಹಾಕಿದರೆ, ಮಗನನ್ನು ವಿಲಾಯ್ತಿಯಲ್ಲಿ ಓದಿಸಬಹುದು ಎನ್ನುವ ಸಹಜವಾದ ಆಶೆಯಿಂದ. ಹಿರಿಯ ನಾಯಕರು, ಹಿರಿಯ ಅಧಿಕಾರಿಗಳನ್ನು ಆದರದಿಂದ ಬರಮಾಡಿಕೊಂಡು ಆಣತಿ ಈಯುತ್ತಾರೆ. ಇನ್ನೇನು-ಸ್ವರ್ಗವೇ ಎಟುಕಿದೆ ಪಟೇಲ್ ಪಾಪಣ್ಣನಿಗೆ! ಆದರೆ ಕನಸಿನಲ್ಲಿ ಮಾತ್ರ ಈ ಆಣತಿ ಯಾಗಿದೆ. ಕೊರಕ್ಲಾಚಿಹಳ್ಳಿಗೆ ವಿದ್ಯುಚ್ಛಕ್ತಿ ಬರಲು ಇನ್ನೂ ಮೂರುವರ್ಷ ಸಾಧ್ಯ ವಿಲ್ಲ, ಏಕೆಂದರೆ ಸಾಮಾನು ಸರಂಜಾಮು ಸಾಕಷ್ಟಿಲ್ಲ ಎಂದು ಕೊರಕ್ಲಾಚಿ ಹಳ್ಳಿಯ ಸುಪರ್ದಿನಲ್ಲಿರುವ ಎಲೆಕ್ಟ್ರಿಕ್ ಇನ್ಸ್‌ಪೆಕ್ಟರು ವರದಿ ಒಪ್ಪಿಸಿದ್ದಾನೆ—ಮೇಲಧಿಕಾರಿ ಗಳಿಗೆ.

ಎಲಕ್ಕಟ್ರಿ ಇನ್ಸ್‌ಪೆಕ್ಟರು ಕೊರಕ್ಲಾಚಿಹಳ್ಳಿಗೆ ಬಂದಿದ್ದಾಗ, ಪಟೇಲ್ ಪಾಪಣ್ಣ ಅವರನ್ನು ಕಂಡು ಅವರ ಸುಖಪ್ರವಾಸ, ಸೌಖ್ಯ ಸರ್ವೆಗೆ ಸಹಾಯಮಾಡಬಾರ ದಾಗಿತ್ತೇ! ಹೇಳಿಕಳಿಸಿದರೂ ಹೋಗಬೇಡವೇ?

ದೇವರು, ಹಾಗೂ ಪೂಜಾರಿಯು ವರ ಕೊಟ್ಟರೂ, ತೀರ್ಥ, ಪ್ರಸಾದ ಕೊಡು ವವನು ಕೈಕೊಟ್ಟು, ನರಕ ದರ್ಶನ ಮಾಡಿಸಬಹುದಲ್ಲವೇ! ಅವನೇ ಅಲ್ಲವೇ ಕಾರ್ಯಕರ್ತ!!

ಮೂವತ್ತು ಎಕರೆ ಖುಷ್ಕಿ ಜಮೀನನ್ನು, ತರಿ ಜಮೀನ್ ಮಾಡಿಸುವ ಆಶೆ ಯಿಂದ, ರಾಜೀವಪುರದ ಹೊನ್ನುಹೊಳೆಯಿಂದ ಕಾಲುವೆ ಒದಗಿಸುವ ಪ್ರಯತ್ನ ಕ್ಕಾಗಿ, ಪಟೇಲ್ ಪಾಪಣ್ಣ ಸರ್ವಶ್ರೀ ಸಚಿವರೆದುರಿಗೆ, ಸರ್ವ ಪತ್ರಿಕೆಗಳ ಬಾತ್ಮೀ ದಾರರ ಸಾಕ್ಷಿಯಲ್ಲಿ, ತನ್ನದಲ್ಲದ, ವಾರಸುದಾರರಿಲ್ಲದ, ಇದು ಯಾರಿಗೂ ತಿಳಿಯದ;

ಎರಡೆಕರೆ ಬಂಜರು ಭೂಮಿಯನ್ನು, ವಿದ್ಯಾ ಭೂದಾನಕ್ಕಾಗಿ ವಿಾಸಲಾಗಿರಿಸಿ ಧಾರೆ ಎರೆದುಕೊಟ್ಟಿದ್ದ. ಆ ಪೂರ್ವ ಪುಣ್ಯದ ಫಲ ಭೋಗಕ್ಕಾಗಿ, ಆ ಕಾಲುವೆಯನ್ನು ಶೀಘ್ರದಲ್ಲಿ ರಚಿಸಲು ಮರಾಮತ್ ಅಧಿಕಾರಿಗಳಿಗೆ ಮುಲಾಮು ಹಚ್ಚಲು ಬೆಂಗಳೂರಿಗೆ ಬಂದಿದ್ದ. ದೇವರೂ ತನ್ನವನೇ, ಪೂಜಾರಿಯೂ ತನ್ನವನೇ, ತೀರ್ಥ ಪ್ರಸಾದ ಕೊಡುವವನೂ ತನ್ನವನೇ! ಅಂದಮೇಲೆ ಸಿದ್ಧಿ ಅಂಗೈಯಲ್ಲೇ ಅಂದುಕೊಂಡಿದ್ದ ಪಟೇಲ್ ಪಾಪಣ್ಣ!—ಪಾಪ!!—

ಆದರೆ ಕೊರಕ್ಲಳ್ಳಿಯ ನೀರಗಂಟಿ ಈರಯ್ಯನ ಮನೆಯಲ್ಲಿ ಹೆರಿಗೆ ಆದಾಗ, ಪಟೇಲ್ ಪಾಪಯ್ಯ ಸಾಂಬ್ರಾಣಿ ಕಾಣಿಕೆಯನ್ನು ಕ್ರಮವಾಗಿ ಕೊಟ್ಟಿಯೇ ಇತ್ತಿಲ್ಲ!!

ನೀರಗಂಟಿ ಹೇಳಿದಂತೆ ಸರ್ವೇರ್ವಾಸಿ ಬರೆದಿಟ್ಟ "ಕೊರಕ್ಲಾಚಿಹಳ್ಳಿಗೆ ಕಾಲುಗೆ ತೋಡಿದರೆ ನೀರು ಮೇಲಕ್ಕೆ ಹರಿಯುವುದಿಲ್ಲ." ಎಂದು ಅದು, ಮೇಲೆ, ಮೇಲೆ, ಇನ್ನೂ ಮೇಲಕ್ಕೆ ಹೋಗಿ, "ಕಾಲುವೆ ಯೋಜನೆ ಬೇಡ, ಬೇಡ, ಬೇಡವೇ ಬೇಡ" ಎಂದು ಹುಕುಂ ರೂಪದಲ್ಲಿ ಹಿಂತಿರುಗಿತು. ಆಗ ಪಟೇಲ್ ಪಾಪಣ್ಣ ಕನಸಿನಲ್ಲಿಯೇ ಬೆಚ್ಚಿತ್ತ!

ದೇವರು ವರ ಕೊಡಬಹುದು. ಪೂಜಾರಿ ವರ ಕೊಡಬಹುದು, ತೀರ್ಥ ಪ್ರಸಾದ ಹಂಚುವವ ವರ ಕೊಡಬಹುದು, ಆದರೆ ಕೊಟ್ಟ ವರ ಫಲಿಸಬೇಕಾದರೆ ದೇವಸ್ಥಾನದ ಹೊಸಿಲು ಕೂಡ 'ಅಸ್ತು' ಎನ್ನಬೇಕು. ಹೊರಬಾಗಿಲ ಹೊಸಲಿಗೆ ಮೊದಲು ಕೆಮ್ಮಣ್ಣು ರಂಗೋಲಿ ಹಚ್ಚಬೇಕು, ನಂತರವೇ ತಲೆಗೆ ಮಲ್ಲಿಗೆ ಮೊಗ್ಗು ಎಂದು ಪಟೇಲ್ ಪಾಪಣ್ಣ ಅರಿತ.

* * *

ಆಷಾಢ ಬಿದಿಗೆ ೯ ಗಂಟೆಗೆ ಪಟೇಲ್ ಪಾಪಣ್ಣ ಎಚ್ಚಿತ್ತ. ಮಲಗಿದ್ದಲ್ಲೇ ನಡುಗಿದ. ಮನೆಯವರು ಆರೆಂಟು ಕಂಬಳಿ ಹೊದಿಸಿದರು. ಆದರೂ ನಡುಗುತ್ತಲೇ ಇದ್ದ. ಮನೆಯವರು ಘರವಾಗರಂ ಕಾಫೀ ಕುಡಿಸಿದರು. ಇನ್ನೂ ನಡುಗುತ್ತಲೇ ಇದ್ದ. "ಆಕೆ" ಹಣೆಯಮೇಲೆ ಮುಂಗೈ ಇಟ್ಟಳು. "ಕೆಂಡಾಮಂಡಲ ಜ್ವರ!" ಎಂದು ಕೂಗಿದಳು. ಕೂಡಲೇ ದೇವರ ಪಟದ ಹತ್ತಿರ ಹೋಗಿ, ನನ್ನ ತಾಳಿ ಗಟ್ಟಿಯಾಗಿರುವಂತೆ ವರ ಕೊಡು, ಗೌರವ್ವಾ! ಜ್ವರ ಇಳಿಯುವತನಕ, ನೀರು ಆಹಾರ ಮುಟ್ಟಲ್ಲ;—ನಿನಗೆ ಮಂಗಳವಾರ ಶುಕ್ರವಾರ ಹೂ-ವೀಳ್ಯ ಕೊಡುತ್ತೇನೆ —ಈ ತಿಂಗಳಲ್ಲಿ—ಎಂದು ಕಠಿಣ ಹರಕೆ ಹೊತ್ತಳು. ನಂತರ ಹಗೂರಾದ ಮನಸ್ಸಿನಿಂದ ಪಟೇಲನು ಮಲಗಿದ್ದೆಡೆಗೆ ಬಂದಳು.

ಕಾಳ! ಶ್ಯಾನಭೋಗನ್ನು ಕರೆತಾರೋ" ಎಂದಳು. ಪಟೇಲನ ಹಣೆಗೆ ಎದೆಹಾಲಿನಲ್ಲದ್ದಿದ ಒದ್ದೆಬಟ್ಟೆ ಹಾಕಿದಳು.

ಶ್ಯಾನುಭೋಗ ಶಾಮಣ್ಣ ಕೂಡಲೇ ಬಂದ. ಅವನನ್ನು ನೋಡಿ ಕಿಡಿಕಿಡಿಯಾಗಿ ಆಕೆ ಅಂದಳು "ವಾಲೆಗರಿಯಲ್ಲಿದೆ ಎಂದು ಭಕ್ತಿಯಿಂದ ಇವರು ನೀವು ಹೇಳಿದಂತೆ ಮಾಡಿದರು 'Flu' ಬಾರದಿರಲಿ ಎಂದು. ನೀವು ಹೇಳಿದ್ದನ್ನು ಮಾಡಿದ ಮರು ಬೆಳಗ್ಗೆ, ಬರಬಾರದ್ದು ಬಂದೇಬಿಡ್ತು" ಎಂದು.

ಶ್ಯಾನುಭೋಗ ಶಾಮಣ್ಣ ಸಾವಧಾನವಾಗಿ ಅಂದ "ಅಕ್ಕಾ!! ನಾನು ಹೇಳಿದ್ದನ್ನು ಭಕ್ತಿಯಿಂದ ಮಾಡಿದ, ಆದರೆ ಬೆಂಗಳೂರು ಪ್ರವಾಸಕ್ಕೆ ತೊಂದರೆ ಯಾಗದಿರಲಿ ಎಂಬ ಆಶೆಯಿಂದ. ಅದಕ್ಕೇ ಕಷಾಯ ಪರಿಣಾಮಕಾರಿಯಾಗಲಿಲ್ಲ. ಆದರೆ ನಿಮ್ಮ ಮಾಂಗಲ್ಯ ಅವನನ್ನು ಏನು ಬಂದರೂ ಖಂಡಿತ ಕಾಪಾಡುತ್ತದೆ"

ಪಟೇಲ್ ಪಾಪಣ್ಣ ಚಾತುರ್ಥೀದಿನ ಗುಣಗೊಂಡು ಎದ್ದ. ನಗುತ್ತ ಸೀರ ಗಂಟೆ ಮನೆಗೆ ಬಾಳೆಗೊನೆ ಕಳಿಸಿ; ಎಲೆಕ್ಟ್ರಿ ಇನ್ಸ್‌ಪೆಕ್ಟರಿಗೆ, ಒಂದು ಕರಾವು ಹಸು ಕಳಿಸಿ; ಸೊಸೈಟಿ ಕಾರಖೂನನಿಗೆ, ಒಂದು ಖಂಡುಗ ಭತ್ತ ಕಳಿಸಿ, ಶ್ಯಾನುಭೋಗ ನಿಗೆ, ಒಂದು ಹಣತೆ ಬೆಣ್ಣೆ ಕಳಿಸಿ, ಎಂದ.

ಶ್ರಾವಣದಲ್ಲಿ ಕೊರಕಲ್ಲಾ ಚೆಹಳ್ಳಿಯ ಬದಿಯಲ್ಲೇ ಕಾಲುವೆ ಬಂತು. ಅಂಗಳದಲ್ಲಿ ಹಿಟ್ಟಿನಮಿಲ್ ಬಂತು. ಸೊಸೈಟಿಯೂ ಸ್ಥಾಪನೆಯಾಯ್ತು!!

ಪಟೇಲನ ಮಗ ವಿಲಾಯ್ತಿ ವ್ಯಾಸಂಗಕ್ಕೆ Visa ಕೂಡ ಪಡೆದಾಯ್ತು.

---

ಚಿನ್ನದ ಬೆಲೆ ಹೆಚ್ಚಾಗುತ್ತಿರುವುದರಿಂದ ಚಿನ್ನಮ್ಮನ ಕಾಟ ಮನೇಲಿ ತಡೆ ಯೋದು ಅತಿಕಷ್ಟ ಎಂದು ಚಿನ್ನಸ್ವಾಮಿಯವರು ಬರೆದಿದ್ದಾರೆ.

*　　*　　*

ಇರುಳು ಕಂಡ ಹೆಣ್ಣನ್ನು ಹಗಲಲ್ಲಿ ಯಾರಾದರೂ ಮದುವೆಯಾಗುವರೇ? ಎಂದೊಬ್ಬರು ಪ್ರಶ್ನಿಸಿದ್ದಾರೆ.

—ಪಾಪ.

*　　*　　*

ಅಬ್ಕಾರಿ ವಿಷಯಗಳನ್ನು ಸಾರ್ವಜನಿಕರಿಗೆ ಒಬ್ಬರು ಬಯಲಗಿಟ್ಟರೆ ಇನ್ನೊ ಬ್ಬರು ಅಮ್ಮಾನಿ ಕೆರೆಯನ್ನೇ ಕೋಡಿ ಹರಿಸುತ್ತೇವೆ ಎನ್ನುತ್ತಾರೆ.

*　　*　　*

# ಶಿವನ ನಗು

ಬೊಗುಳಿ ಉಗುಳುವರೆಲ್ಲ ಫ್ಲೂ ಪೀಡಿತರೇ, ಎಲ್ಲ
ಲೀವಾಪ್ಲಿಕೇಷನೂ ಖಾಯಿಲೆಯುದೆ ? ॥ ಪ ॥
ಮೂಗ್ ಹಿಡಿದು ನೆಗಡಿಯಲಿ ಮುಳುಗಿ ಮೊಸ ಮೊಸ ಎಂದು
ಮಡದಿ ಮಕ್ಕಳನೆಲ್ಲ ಬೈದು ಬಡಿದು
ರೋಗ, ಫ್ಲೂ,–ನನಗೆಂದು ಸುಳ್ಳು ಪತ್ರವ ಬರೆಯೆ
ನೀತಿ ತಪ್ಪಿದವನೆಂದು ನಗುವ ಶಿವನು ॥
ಮೆಣಸು ಶುಂಠಿಯ ಕುಡಿಮ, ಯೂಕಲಿಪ್ಟಸ ಬಳಿದು
ಮನೆ ಎಲ್ಲ ಸಾಂಮ್ರಾಣಿ ಹೊಗೆಯು ತುಂಬಿ
ಕೆಟ್ಟ ಕೆಮ್ಮನು ಕಲಿತು ಹೆದರಿ ಮೈ ಬೆವರುವಾ
ನಿತ್ಯರೋಗದ ಮೃಗಕೆ ನಗುವ ಶಿವನು ॥
ದಾರಿಗರ ಬೀದಿಗರ ಉದರದಲಿ ವಾಸಿಸುವ
ಹುಳಗಳನು ಉಸಿರಾಡಿ ಒಳಕೆ ಎಳೆದು
ತನ್ನ ನರದಲಿ ಬೆಳೆಸಿ ಲಾಲಿ ಹಾಡಿ
ಅಯ್ಯೊ ಅಪ್ಪಾ ಎನಲು,....ನಗುವ ಶಿವನು ॥
ಅಗೊ ಬಂತು, ಇಗೊ ಬಂತು, ಈ ಊರು, ಈ ಕೇರಿ
ನಮ್ಮ ಬೀದಿಗು ಬಂತು ಮನೆಗೆ ಬಂತು
ಹೆದರಿ ಹೇಡಿಗಳಂತೆ ಹಾಸಿಗೆಲಿ ಕಾಲು ಚಾಚಿ
ಫ್ಲೂ ಎನಗೆ! ಫ್ಲೂ!–ಎನಲು, ನಗುವ ಶಿವನು ॥
ಕೋಟಿ ಪೆನ್‌ಸಿಲಿನೆನಗೆ ಕೊಡಿ ಎನಗೆ, ಡಾಕ್ಟರೆ!
ಸೊಂಟ ನೆಟ್ಟಗೆ ಇಲ್ಲ, ಹೊಟ್ಟೆ ಕಿಚ್ಚು,
ತಲೆಭಾರ ಕಣ್‌ಬೇನೆ ತಾಳಲಾರೆನು ಎನುವ
ವೇಷಧಾರಿಗಳ ಕಂಡು, ನಗುವ ಶಿವನು ॥
ಇನ್‌ಫ್ಲುಯೆನ್‌ಸಾ ಎಂಬ ರಾಜವ್ಯಾಧಿಗೆ ಜನತೆ
ಫ್ಲೂ ಎಂಬ ಕಿರುನಾಮ ಹಣೆಗೆ ಬಳಿಯೆ
ಅಪರಾಧವೆಸಗಿನಾವಪಮಾನ ಗೊಳಿಸಲದು
ಬಡಿದು ಬೀಳಿಸೆ ಜನರ....ನಗುವ ಶಿವನು ॥

—ನಾ. ಕಸ್ತೂರಿ

# ಯಾರು ದಡ್ಡರು?

ಮೊನ್ನೆ ಮೊನ್ನೆ ಮೂರ್ತಿ ಸರ್ವೀಸ್ ಕಮಿಷನ್ ಪರೀಕ್ಷೆಗೆ ಕುಳಿತುಕೊಂಡಿದ್ದ. ಅಭ್ಯರ್ಥಿಗಳ ಲೋಕ ಪರಿಜ್ಞಾನವನ್ನು ಪರೀಕ್ಷಿಸುವುದಕ್ಕಾಗಿ ಪ್ರಶ್ನೆಪತ್ರಿಕೆಯೊಂದಿರುತ್ತದಲ್ಲ—ಅದರಲ್ಲಿನ ಹೆಚ್ಚಿನ ಪ್ರಶ್ನೆಗಳನ್ನು ತೃಪ್ತಿಕರವಾಗಿ ಉತ್ತರಿಸಿದ್ದಾಯಿತು. ಕೊನೆಯದಾಗಿ ಕೆಲವು ವಿಷಯಗಳ ಕುರಿತು ಚಿಕ್ಕ ಟಿಪ್ಪಣಿ ಬರೆಯಲು ಹೇಳಿದ್ದರು. ಪಂಡಿತ್ ನೆಹರೂರವರ ಕುರಿತು ಕೂಡ ಟಿಪ್ಪಣಿ ಬರೆಯಬೇಕಿತ್ತು. ಚೆನ್ನಾಗಿ ಯೋಚಿಸಿ ಎರಡೇ ಮಾತುಗಳಲ್ಲಿ ನೆಹರೂರವರ ಪ್ರತಿಭಾಪೂರ್ಣವಾದ ವ್ಯಕ್ತಿ ಚಿತ್ರವೊಂದನ್ನು ಕೊಡುವ ಯೋಗ್ಯತೆ ಮೂರ್ತಿಯಲ್ಲಿತ್ತು. ಆದರೆ ಉತ್ತರ ಬರೆದು ಬರೆದು ಅಷ್ಟರಲ್ಲೇ ಅವನಿಗೆ ತಲೆನೋವು ಬಂದಿತ್ತು. ಮಾತ್ರವಲ್ಲದೆ ಒಂದು ಬಗೆಯ ಹುಚ್ಚು ಸ್ಫೂರ್ತಿ ಕೂಡ ಕಾಡಿತೊ ಏನೊ, 'ಪಂಡಿತ್ ನೆಹರೂ—ಅಮೇರಿಕದ ಅಧ್ಯಕ್ಷರು' ಎಂದು ಬರೆದು ತನ್ನೊಳಗೇ ನಗುತ್ತಾ ಪೇಪರ್ ಕೊಟ್ಟು ಬಂದುಬಿಟ್ಟ ಮೂರ್ತಿ.

ಮೂರ್ತಿಯ ಜೊತೆಗೆ, ಹತ್ತಿರ ಕೂಡೆ ಹನ್ನೊಂದನೆಯವನಾಗಿ, ಶಂಕರು ಕೂಡ ಪರೀಕ್ಷೆಗೆ ಕುಳಿತಿದ್ದ. ಪ್ರಶ್ನೆಪತ್ರಿಕೆಯನ್ನು ಕಂಡೊಡನೆ ಯಾವುದಕ್ಕೆ ಏನು ಬರೆಯಬೇಕೆಂದು ಅವನಿಗೆ ತೋಚಲಿಲ್ಲ. ಸರಿ; ಬಾಯಿಗೆ ಬಂದಿದ್ದನ್ನು ಬರೆದ. ಟಿಪ್ಪಣಿಗಳಲ್ಲಂತೂ 'ಸ್ಪೆಶಲೈಸ್'ಮಾಡಿದ. 'ಭಾರತದ ದೊಡ್ಡ ಹಡಗು ಕಟ್ಟುವ ಕೇಂದ್ರ ಬೆಂಗಳೂರು.' 'ವಿಟಮೀನುಗಳು ವೈಟ್‌ನಾಮ್‌ನಲ್ಲಿ ಬೆಳೆಯುತ್ತವೆ'—ಎಂದು ಮುಂತಾಗಿ ಹುಚ್ಚು ಹುಚ್ಚು ಬರೆದು ಶಂಕರು ಪೇಪರ್ ಮಡಚಿಕೊಟ್ಟು ಬಂದ.

ಫಲಿತಾಂಶ ಗೊತ್ತಾಯಿತು. ಮೂರ್ತಿ ರ‍್ಯಾಂಕು ಗಳಿಸಿದ್ದ. ಶಂಕರುವಿನದು ಸದ್ದಿಲ್ಲ. ಆದರೆ ಫಲಿತಾಂಶದ ಬೆನ್ನಿಗೆ ಇತ್ತೀಚಿಗೆ ಬೇರೆ ಕೆಲವು ಸ್ವಾರಸ್ಯದ ಚುಟುಕಗಳು ಬರುತ್ತವಲ್ಲ—ಅವೂ ಬಂದುವು. ಪರೀಕ್ಷೆಗೆ ಕುಳಿತವರು ಬರೆದ ಹುಚ್ಚುಹುಚ್ಚು ಉತ್ತರಗಳ ಪಟ್ಟಿಯನ್ನು ಶ್ರಮಪಟ್ಟು ತಯಾರಿಸಿ ಪರೀಕ್ಷಾಧಿಕಾರಿಗಳು ಪೇಪರುಗಳಲ್ಲೆಲ್ಲ ಪ್ರಕಟಿಸಿದ್ದರು. ಅದರಲ್ಲಿ ಪಂಡಿತ್ ನೆಹರು ಅಮೇರಿಕದ ಅಧ್ಯಕ್ಷರು ಎಂದು ಮೂರ್ತಿ ಬರೆದಿದ್ದೂ, ಬೆಂಗಳೂರು ಹಡಗು ಕಟ್ಟುವ ಕೇಂದ್ರ ಎಂದು ಮುಂತಾಗಿ ಶಂಕರು ಗೀಚಿದ್ದೂ—ಅಲ್ಲದೆ ಇನ್ನೂ ಹಲವಾರು ಹುಚ್ಚಾಪಟ್ಟೆ ಉತ್ತರಗಳೂ, ನಮೂದಿಸಲ್ಪಟ್ಟಿದ್ದುವು. ಇಂಥ ದಡ್ಡರೂ ಇದಾರೆ ನೋಡಿ ನಮ್ಮ ತರುಣರಲ್ಲಿ ಎಂದು ತೋರಿಸುವುದಕ್ಕಾಗಿ ಬುದ್ಧಿವಂತರೆಲ್ಲ ಅವುಗಳನ್ನು ಜೋಡಿಸಿ ಪ್ರಕಟಿಸಿದ್ದರು.

ಸರಿ. ಉಳಿದ ಬುದ್ಧಿವಂತರೆಲ್ಲ ಅಯ್ಯೋ ಈ ಮಟ್ಟಕ್ಕೆ ಬಂತೆ ನಮ್ಮ ವಿದ್ಯಾಭ್ಯಾಸ ಎಂದು ಗೋಳಿಟ್ಟರು. ಹೀಗಾದರೆ ಮುಂದೇನು ಗತಿ ನಮ್ಮ ನಾಡಿಗೆ ಎಂದು ಬಿಸುಸುಯ್ದರು. ವಿದ್ಯಾಭ್ಯಾಸದ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆಗಳಾಗಬೇಕು ಎಂದು ಕೆಲವರು ಸಾರಿದರು. ವಿಧಾನ ಸಭೆಯಲ್ಲಿ ಬಿಸಿಬಿಸಿ ಚರ್ಚೆಯಾಯಿತು. ಪತ್ರಿಕೆಗಳು ಬಹಳ ಕಳಕಳಿಯಿಂದ ಸಂಪಾದಕೀಯ ಬರೆದುವು. ಆದರೆ ಪ್ರತಿಯೊಬ್ಬರೂ ಆ ಹುಚ್ಚು ಹುಚ್ಚು ಉತ್ತರಗಳನ್ನು ಓದಿ ಅವುಗಳಲ್ಲಿದ್ದ ಸ್ವಾರಸ್ಯಕ್ಕಾಗಿ ಸಂತೋಷಪಡದೆ ಇರಲಿಲ್ಲ. ಆ ಉತ್ತರಗಳ ಪೈಕಿ ಹೆಚ್ಚಿನವು ಅಜ್ಞಾನದಿಂದ ಬಂದವುಗಳಾಗಿದ್ದರೂ, ಕೆಲವಾದರೂ ಮೂರ್ತಿ ಶಂಕರುವಿನಂಥವರ ಹುಡುಗಾಟದಿಂದ ಏಕೆ ಬಂದಿರಬಾರದು ಎಂದು ಯಾರಿಗೂ ಅನಿಸಲಿಲ್ಲ.

"ಲ್ರೋ ಯಾಕಪ್ಪಾ ಹೀಗೆಲ್ಲಾ ತಮಾಷೆಗೆಂದು ಬರೆದುಬಿಟ್ಟು ಸಮಾಜದ ಶಾಂತಿ ಕೆಡಿಸಿ ವಿದ್ಯಾ ಇಲಾಖೆಯವರಿಗೆ ತಲೆನೋವು ಬರಿಸುತ್ತೀರ" ಎಂದು ಮೂರ್ತಿಯನ್ನು ಕೇಳಿದರೆ ಅತ ಉತ್ತರ ರೂಪವಾಗಿ ಒಂದು ಕಥೆ ಹೇಳಿದ. ಹೇಳುತ್ತೇನೆ ಕೇಳಿ.

ಹಿಂದೊಮ್ಮೆ ಸಮಾಜ ಸುಧಾರಕರೊಬ್ಬರು ಒಂದು ಹಳ್ಳಿಗೆ ಹೋಗಿ ಹಳ್ಳಿಯ ಹೈದರಿಗೆಲ್ಲ ಒಂದೊಂದು ಪ್ರಶ್ನೆ ಹಾಕಿದರಂತೆ. "ಏನು ಹಾಕಿ ಒಗೆದರೆ ಬಟ್ಟೆಗಳು ಮಡಿಯಾಗುತ್ತವಪ್ಪ ಅಗಸರ ಕೈಲಿ?" ಎಂದು ಕೇಳಿದರಂತೆ, ಕೆಳಹಟ್ಟಿಯ ಪುಟ್ಟನನ್ನ. ಆ ಖದೀಮ ಬೆಪ್ಪುಮೂತಿಮಾಡಿಕೊಂಡು "ಅಗಸರ ಕತ್ತೆ ಲದ್ದಿ ಬುದ್ದಿ" ಎಂದುಬಿಡೋದೆ? ಆ ಅಸಾಧಾರಣ ಮೂಢತನದ ಉತ್ತರದಿಂದ ಸಮಾಜಸುಧಾರಕರ ಸ್ವಸಾಮರ್ಥ್ಯದ ಹೆಮ್ಮೆ ನೂರ್ಮಡಿ ಬೆಳೆದು ಅತ ಅಲ್ಲಿ ಪಕ್ಕೆಹಿಡಿದುಕೊಂಡು ನಕ್ಕಿದ್ದಲ್ಲದೆ ಪೇಟೆಗೆ ಹಿಂದಿರುಗಿದಮೇಲೆ ನೋಡಿ ನಮ್ಮ ಹಳ್ಳಿಗಳ ಕಡೆ ಹಬ್ಬಿರುವ ಮೌಢ್ಯ ಎಂದು ಪುಟ್ಟನು ಕೊಟ್ಟ ಉತ್ತರದ ಸಮಾಚಾರ ಹೇಳಿ ದೊಡ್ಡ ಲೆಕ್ಚರು ಕೊಟ್ಟರಂತೆ. ಇತ್ತ ಪುಟ್ಟ ನದಿಗೆ ಹೋಗಿ ಸ್ನಾನಮಾಡಿ ಬಟ್ಟೆಗೆ ಸೋಪುಹಚ್ಚಿ ಒಗೆದು ತರುತ್ತಲೇ ಇತ್ತ.

ಇಷ್ಟೇ ಕಥೆ. ಹೆಚ್ಚು ವಿವರ ಬೇಕಿಲ್ಲ. ಅಂತೂ ಲೋಕದಲ್ಲಿ ಯಾರು ದಡ್ಡರೆಂದು ಥಕ್ಕನೆ ಹೇಳುವಹಾಗಿಲ್ಲ.

—ರಾಮು.

# ದ್ವಿಚಕ್ರೀ ಲೋಕಸಂಚಾರಿ

"ಏಕಚಕ್ರ ಸದಾಭೋಗಿ" ಎಂದು ಹೇಳಿದ ಶಂಕ್ರಪ್ಪ. ಅವನಿಗೆ ಸದಾ ಇನ್ನೊಬ್ಬರ ಅಂಗೈ ನೋಡಿ ಗೆರೆಗಳನ್ನು ಪರೀಕ್ಷಿಸಿ ಭವಿಷ್ಯ ನುಡಿಯುವ ಗೀಳು. ವಿದ್ಯಾರ್ಥಿ ದೆಸೆಯಲ್ಲಿ ಹಾಸ್ಟೆಲ್ಲು ಜೀವನ—ತಿಂಗಳಿಗೆ ಸರಿಯಾಗಿ ಬರುವ ಹಣ-ನಿತ್ಯ ನೋಡುತ್ತಿದ್ದ ಸಿನಿಮ—ಆಡುತ್ತಿದ್ದ ಇಸ್ಪೀಟು—ತಿರುಗುತ್ತಿದ್ದ ಪಾರ್ಕು-ಮಹರಾಣಿ ಕಾಲೇಜು ಗೇಟು ಬಳಿ ಸಿಗುತ್ತಿದ್ದ ಸೌಂದರ್ಯದ ಪೆರೇಡು—ಸದಾ ಸರ್ಜಸೂಟು ಇಷ್ಟೆಲ್ಲ ನನಗೆ ದೊರಕಿರುವಾಗ ಯಾವ ಭೋಗಿಗೆ ಕಡಿಮೆ ನಾನು? ನಿಜ ಶಂಕ್ರಪ್ಪ ಹೇಳಿದ್ದು—ಎಂದು ನಂಬಿ ಮೆರೆಯುತ್ತಿದ್ದೆ. ಹೀಗೇ ಸಾಗಿತ್ತು ದಿನ.

ಅವನಿಗೆ ಕೈನೋಡುವ ಚಟವಿದ್ದಂತೆ ನನಗೆ ಕೈತೋರಿಸುವ ಚಪಲ. ಮದುವೆ ಆಗತಾನೆ ಆಗಿತ್ತು. ಆಗತಾನೆ ನನ್ನ ಓದೂ ಮುಗಿದಿತ್ತು ಎಂದು ಹೇಳಲೇಬೇಕಿಲ್ಲ. ಮದುವೆ ಆದಮೇಲೆ ಓದು ಮುಗಿದಂತೆಯೇ ಅಲ್ಲವೆ?

ಇನ್ನೇನು ಕೆಲಸ ಸಿಕ್ಕು ಸಂಪಾದನೆ ಪ್ರಾರಂಭವಾಗಿ ಮನೆಮಾಡಿ ಹೆಂಡ್ತಿನ್ನ ಕರ್‍ಕೊಂಡು ಬಂದು ಸಂಸಾರ ಪ್ರಾರಂಭಿಸಬೇಕು ಅಷ್ಟೆ. ನನ್ನ ಓದು ಮುಗಿಯುತ್ತಿದಂತೆ ನನ್ನ ತಂದೆಯುವರ ದುಡ್ಡೂ ಮುಗಿದಿತ್ತು. ಅಂದಮೇಲೆ ತಾತ್ಕಾಲಿಕವಾಗಿ ಮಾವನ ಮನಿಪರ್‍ಸಿನಿಂದಲೇ ಹೆಂಡ್ತಿ ಹಣ ಕಳಿಸುತ್ತಿದ್ದಳು.

ರಸ್ತೆಯ ಪಕ್ಕದಲ್ಲಿ ನಡೆದುಬರುತ್ತಿದ್ದಂತೇ ಅಂಗೈ ನೋಡಿಕೊಂಡೆ, ಏಕಚಕ್ರ ಸದಾಭೋಗಿ, ಎಂದು ಹೇಳಿದ ಶಂಕ್ರಪ್ಪ ಬಂದು ಕೈಹಿಡಿದ ಅವನಿಗೂ ಮದುವೆಯಾಗಿತ್ತು ಕೆಲಸವಿರಲಿಲ್ಲ.

"ಏನಪ್ಪಾ ಅಂಗೈ ನೋಡ್ಕೋತಿದ್ದಿಯಾ" ಅಂದ.

"ಸದಾಭೋಗಿ ಅಂತ ಹೇಳಿದ್ದೆಯಲ್ಲಾ ಹಿಂದೆ ಸಧ್ಯಕ್ಕೆ ಯೋಗಿಯಾಗೋ ಯೋಗ ಒದಗಿಬರೋಹಾಗಿದೆ"

"ಎಲ್ಲಿ-ಇನ್ನೊಮ್ಮೆ ಚೆನ್ನಾಗಿ ನೋಡ್ತೀನಿ—ಕೈಕೊಡು"

ಎಂದು ನನ್ನ ಅಂಗೈಯನ್ನ ಪರೀಕ್ಷಿಸುತ್ತಾ ನಿಂತ—ಹಾಗೇ ಕೂಡು ಎಂದು ರಸ್ತೆಯ ಪಕ್ಕಕ್ಕೆ ಕೂತ. ಹುಬ್ಬು ಏರಿಸಿ ಕಣ್ಣಲ್ಲಿ ಕಣ್ಣಿಟ್ಟು ಹಸ್ತಸಾಮುದ್ರಿಕ

ಪಂಡಿತೋತ್ತಮನಂತೆ ಕೈನೋಡಿದ. ಒಬ್ಬಿಬ್ಬರು ನಿಂತು ನೋಡಿದರು. ಮತ್ತಿಬ್ಬರು ಕುಂತು ನೋಡಿದರು. ಗುಂಪೇ ಸೇರಿ ಶಂಕ್ರಪ್ಪನ ಸಾಮುದ್ರಿಕ ನೋಡಿದರು.

ಅವನು ಹೇಳಿದ—

"ನಿನಗೆ ಇಪ್ಪತ್ನಾಕನೆ ವಯಸ್ಸಿನಲ್ಲಿ ದೊಡ್ಡ ವಿಪತ್ತು ಬಂದಿತ್ತು"

"ಹೌದು ಆ ವಯಸ್ಸಲ್ಲೇ ನನ್ನ ಮದುವೆಯಾದದ್ದು"

"ಎರಡು ವರ್ಷದ ಹಿಂದೆ—ಯಾವುದಾದರೂ ಖಾಯಿಲೆಯಿಂದ ಹಾಸಿಗೆ ಹಿಡಿದಿದ್ದೆಯಾ?"

"ಇಲ್ಲವಲ್ಲಾ....!"

"ಜ್ವರ ಗಿರ ಬಂದಿರಲೇಬೇಕು...."

"ಹೌದು ಬಂದಿತ್ತು—ಜ್ವರ ಬಂದು ಸತಾಯಿಸಿತು.........ಮದುವೆ ಆದಮೇಲೆ ಜ್ವರ ಬಿಡ್ತು... ಅದು ಪ್ರೇಮ ಜ್ವರ...."

"ಎಂಥದೋ ಅಂತೂ ಜ್ವರ ಬರದಿದ್ದು ನಿಜವೋ....ನೀನು ಸುಳ್ಳು ಅಂದೀಯ ಇಲ್ಲಿ ನಿನ್ನ ಕೈಯ್ಯ ಗೆರೆ ಸುಳ್ಳು ಹೇಳೀತೇ . ಇಲ್ಲಿ ಅರರರೇ...." ಎಂದು ಮರುಗಿದ. ಸುತ್ತ ನಿಂತ ಮಂದಿ ಕುತೂಹಲದಿಂದ ನೋಡಿದರು.

"ಹೆಡ್‌ಲೈನು ಇನ್ನು ಕಾಲಂಗುಲ ಮುಂದುವರೆದು fate ಲೈನು ಕೊಂಚ ಸ್ಪಷ್ಟವಾಗಿದ್ದು ಧನರೇಖೆ ಸ್ವಲ್ಪ ಧಡೂತಿಯಾಗಿದ್ದಿದ್ದರೆ ನೀನು ಮಂತ್ರಿ ಆಗೋ ಯೋಗವಿತ್ತು"

"ಜೇಬಲ್ಲಿ ಬ್ಲೇಡಿದೆಯ?"

"ಯಾತಕ್ಕೆ?"

"ಹೆಡ್‌ಲೈನು ಫೇಟ್‌ಲೈನು ಧನರೇಖೆನ ಕೊರೆದು ಸ್ಪಷ್ಟವಾಗಿ ಕಾಣಿಸಿಬಿಡು"

"ಅಯ್ಯೋ ಹೆಡ್ಡಪ್ಪ ದಡ್ಡನ ಹಾಗಾಡಬೇಡ—ಕೈಗೆರೆ ಬದ್ಲಾಯಿಸೊಕ್ಕಾಗುತ್ಯೆ ....ವೆರಿ ಸ್ಸಾರಿ....ಏಕಚಕ್ರ ಸದಾಭೋಗಿ ಅಂತ ಆಗ ಹೇಳಿದ್ದೆನಲ್ಲಾ ಅದು ಸುಳ್ಳು ....ಎರಡು ಚಕ್ರವಿದೆ ನಿನ್ನ ಕೈಯಲ್ಲಿ—ದ್ವಿಚಕ್ರೀ ಲೋಕಸಂಚಾರಿ"

"ಸರಿ. ಸದಾಭೋಗಿಯಿಂದ—ಲೋಕಸಂಚಾರಕ್ಕೆ ತಂದು ಎಳೆದುಬಿಟ್ಟೆಯಾ?

"ನಿನ್ನ ಹಸ್ತವೇ ಹೇಳುತ್ತಿದೆ — ನಾನು ಅಲ್ಲಿರೋದನ್ನ ಹೇಳ್ತಿದ್ದೇನೆ, ಇಷ್ಟರಲ್ಲೇ ನಿನಗೆ ಕೆಲಸವಾಗುತ್ತೆ ..." ಎಂದು.

—ಎಂದು ಕೈಬಿಟ್ಟು ಆಸಕ್ತಿಯಿಂದ ನನ್ನ ಪಕ್ಕದವನ ಕೈಹಿಡಿದ. ಅವನು ಶಂಕ್ರಪ್ಪನ ಮುಂದೆ ನಾಲ್ಕಾಣೆ ಹಾಕಿ ಕೈಮುಗಿದು ಕೇಳತೊಡಗಿದ. ಹಾಗೇ ನೋಡುತ್ತಿದ್ದೆ—ಮರುದಿನ ಜನಸಂದಣಿ ಹೆಚ್ಚಿ ನೂಕುನುಗ್ಗಲಾಯಿತು, "ಗಲಾಟೆ ಮಾಡಬೇಡಿ—ಕ್ಯೂ ನಿಂತುಕೊಳ್ಳಿ ಎಲ್ಲರಿಗೂ ಒಂದು ಕೈನೋಡುತ್ತೇನೆ" ಎಂದು ಪರಿಸ್ಥಿತಿ ಹತೋಟಿಗೆ ತರುವಂತಹ ಪ್ರಸಂಗದತನಕ ಅವನ ಸಂಸ್ಥೆ ಬೆಳೆದುಬಂತು.

* * *

ನನ್ನ ಮಾವ ಹಣ ಕಳಿಸಿ ಸಾಕಾಗಿ ನನ್ನ ಹೆಂಡ್ತಿಯನ್ನೇ ಕಳಿಸಿದರು. ನೌಕರಿ ನೋಡಲೇಬೇಕಾಯ್ತು. ಪೇಪರ್ರು ನೋಡಿದೆ. "ಸೈಕಲ್ಲುಳ್ಳ ಒಬ್ಬ ಅನುಭವಸ್ಥ ವಾಚಾಳಿ ಬೇಕಾಗಿದ್ದಾನೆ-ಸಂಬಳ ಅರ್ಜಿದಾರನ ವಾಚಾಳತ್ವವನ್ನು ಅವಲಂಬಿಸಿದೆ. ಕೆಳಗಿನ ವಿಳಾಸದಲ್ಲಿ ಮುಖ್ಯ ಬೇಟಿಮಾಡಿ" ಎಂಬ ಜಾಹೀರಾತು ನೋಡಿ ಹಿಗ್ಗಿದೆ. ಮಾವ ಗಂಟು ಹಾಕಿದ ಅರ್ಧಾಂಗಿಗೆ ಅನ್ನ ಕಾಣಿಸಲು ಕೆಲಸ ಸಿಕ್ಕಿತೆಂದು ಹಿಗ್ಗಿದೆ. ಆದರೆ ಸೈಕಲ್ಲು ಎಲ್ಲಿಂದ ತರುವುದು !... ಮಾವನಿಗೇ ಕಾಗದ ಬರೆದೆ. ಅವರು ಅವರ ಮಗಳ ಹಿತದೃಷ್ಟಿಯಿಂದ ಸೈಕಲ್ಲು ಕಳಿಸಿದರು. ಸೈಕಲ್ಲು ಬಂತು—ಆದರೆ ಅದು ಮುಂದಕ್ಕೆ ಹೋಗುತ್ತಿರಲಿಲ್ಲ ಗಾಲಿ ಹಿಂದಕ್ಕೆ ಮಾತ್ರ ತಿರುಗುತ್ತಿತ್ತು. "ರೈಲಿನಲ್ಲಿ ಬರುವಾಗ ಈ ಅವಸ್ಥೆಯಾಗಿದೆ" ಎಂದು ನನ್ನಾಕೆ ಹೇಳಿದಳು.

"ಅಲ್ಲ ಅಲ್ಲ ಈ ಅವಸ್ಥೆಗೆ ಬಂದಿದ್ದರಿಂದಲೇ ಇದನ್ನ ಇಲ್ಲಿಗೆ ಸಾಗಹಾಕಿದ್ದು" ಎಂದೆ.

"ಈಗೇನಾಯ್ತು—ಕೊಂಚ ರಿಪೇರಿಮಾಡಿಸಿಕೊಂಡರಾಗದೆ—ಏನೊ ಕಳಿಸಿದ ಅಲ್ಲಾಂತ ಇಲ್ಲ ."

"ನಿಮ್ಮಪ್ಪ ಕಳಿಸೊ ಸಾಮಾನೆಲ್ಲಾ ಅಷ್ಟೆ—ವಾಚೂಂತ ಪೇಚಾಡ್ದೆ ಸುಣ್ಣದ ಡಬಿಯಂಥ ಹಳೇ ವಾಚು ಕೊಟ್ರು. ಬಂದಲಾಗಾಯ್ತು ರಿಪೇರಿ ಅಂಗ್ಡಿಲೇ ಇದೆ—ಇನ್ನು ಈ ಸೈಕಲ್ಲು ಈಗ್ತಾನೆ ಹೇಳಿದೆಯಲ್ಲಾ ನೀನೇ ರಿಪೇರಿ ಆಗ್ಬೇಕೂಂತ—ಇವೆಲ್ಲಾ ಹೋಗಲಿ—ನಿನ್ನ ಕಳಿಸಿಕೊಟ್ರು ದಿನಂಪ್ರತಿ ನೀನು ನರಳುತ್ತಲೇ ಕೆಮ್ಮುತ್ತೀಯ ನಿನ್ನ ರಿಪೇರಿಗೆ ಡಾಕ್ಟರಿಗೆ ಬೇರೆ ಸಾಲಕೊಡಬೇಕು...."

"ಸರಿ ನಿಮ್ಮ ಹತ್ರ ಮಾತಾಡೋರಿಗೆ ಬುದ್ಧಿ ಇಲ್ಲ....ನಮ್ಮಪ್ಪನ್ನ ಯಾಕೆ ಅಂತೀರ"

"ಆ ಉಂಗುರ ಕೊಡು ಅದನ್ನ ಮಾರಿ ಈ ಸೈಕಲ್ಲು ಸರಿಮಾಡ್ಸಿ ಕೆಲಸಕ್ಕಾದ್ರೂ ಸೇರ್ತೀನಿ...."

"ಇಲ್ಲೀತನಕ ನಮ್ಮಪ್ಪನ್ನ ಅಂದಿದ್ದು ಕೇಳಿಕೊಂಡೂ—ನಮ್ಮಪ್ಪ ಕೊಟ್ಟ ಉಂಗುರ ಕೊಡೋಕೆ ಹ್ಯಾಗೆ ಮನಸ್ಸು ಬರುತ್ತೇಂಪ್ರೆ........ಆದ್ರೂ ಅದೂ ರಿಪೇರಿ

ಮಾಡ್ತೊ ಸಾಮಾನಾಗದೆ ಕೆಲಸ ಸಿಗೋಕೆ ಅನುಕೂಲಮಾಡ್ಕೊಡ್ತಿದೆ—ಅರ್ಥಾತ್ ನಮ್ಮ ತಂಪೆಯೇ ನಿಮಗೆ ಕೆಲಸ ಕೊಡಿಸ್ದಾಗಾಯ್ತು...."

"ಆಗಲಿ—ನಿಮ್ಮಪ್ಪನೇ ಕೆಲಸ ಕೊಟ್ಟ ನಿನ್ನ ಕೊಟ್ಟು ಉಂಗುರ ತಾ"

—ಎಂದು ಹಿಂದುಮುಂದಾಗಿ ಸೈಕಲ್ ನಡೆಸಿಕೊಂಡು ರಿಪೇರಿ ಅಂಗಡಿಗೆ ಹೋದೆ. ಆ ಸೈಕಲ್ ಷಾಪಿನವನು—ಇಂತಹ ಸೈಕಲ್ಲೇ ನೋಡಿರಲಿಲ್ಲವೇನೋ ಎಂಬಂತೆ ಅದನ್ನು ನೋಡಿದ. ಇಂತಹ ವಿಚಿತ್ರ ರಿಪೇರಿಯ ಅವಶ್ಯಕವಿದ್ದ ಸೈಕಲ್ ಅವನ ಸೈಕಲ್ ರಿಪೇರಿ ಸರ್ವೀಸಿನಲ್ಲೇ ಕಂಡಿರದವನಂತೆ ಆಡಿದ.

"ಇದು ಸರ್ಕಸ್ಸಿನವರ ಹತ್ರ ಕೊಂಡುಕೊಂಡ ಸೈಕಲ್ಲೇ ಸಾರ್" ಎಂದ ಅವನು.

"ಇಲ್ವಪ್ಪ—ನಮ್ಮ ಮಾವನವರು ಕಳಿಸಿದ್ದು....ಹಿಂದೆ ಅವರು ಸರ್ಕಸ್ಸಿದಲ್ಲಿದ್ದ ರೇನೋ ನಾನು ಅರಿಯೆ"

"ಇದರ ಎರಡು ಘಾಲಿ ಬಿಟ್ಟು ಮಿಕ್ಕಿದ್ದೆಲ್ಲಾ ಬದಲಾಯಿಸಬೇಕೂ ಸಾರ್" ಎಂದ.

"ಎಷ್ಟಾಗತ್ತೆ"

"ಒಂದು ಪ್ರೇಮು—ಪೆಡಲ್ಲು—ಫ್ರೀಫ್ಲೀಲು—ಚೈನು—ಬ್ರೇಕು—ಬೆಲ್ಲು—ಹ್ಯಾಂಡಲ್ಲು—ಎಂಭತ್ತು ರೂಪಾಯೊಳಗೇ—ಆಗಬಹುದು"

"ಸರಿ ಇದನ್ನ ನೀನೇ ಇಟ್ಕೊಂಡಿರು ಸಾಯಂಕಾಲ ಬಂದು ಹೇಳ್ತೀನೆ"

—ಎಂದು ಹೊರಬಂದೆ. ಉಂಗುರ ಮಾರಿದರೆ—ಕಾಲು ಸವರನ್ನಿನ ಉಂಗುರ –ಅಬ್ಬಬ್ಬಾಂದ್ರೆ ಸುಮಾರು ಹದಿನೆಂಟು-ಹತ್ತೊಂಬತ್ತು ಬಂದೀತು ಆ ಜಾಹಿರಾತಿನ ಆಫೀಸಿಗೆ ಹೋಗಿ ಅಡ್ವಾನ್ಸ್ ಗಿಟ್ಟಿದರೆ ಸೈಕಲ್ ಸರಿಪಡಿಸಿಕೊಂಡು ಕೆಲಸಕ್ಕೆ ಸೇರುವುದು ಎಂದು ಅಲ್ಲಿಗೆ ಹೊರಟೆ. ಏಕೆಂದರೆ ನನ್ನ ವಾಚಾಳತ್ವದಲ್ಲಿ ನನಗೆ ನಂಬಿಕೆ ಇತ್ತು.

ಆ ಆಫೀಸಿನ ಮುಂದೆ ನಿಂತು ಬೋರ್ಡು ನೋಡಿದೆ "ಮೃತ್ಯುಂಜಯ ಜೋತಿಷ್ಯಾಲಯ" ಎಂದು ಬರೆದಿತ್ತು. ಒಳಕ್ಕೆ ಹೋದೆ. ರತ್ನಗಂಬಳಿ ಮೇಲೆ ಮೇಜು ಕುರ್ಚಿ ಹಾಕಿತ್ತು. ಕುರ್ಚಿಮೇಲೆ ಕೂತ ಇಸಮನ್ನು ನೋಡುತ್ತಲೇ 'ಏಕಚಕ್ರ ಸದಾಭೋಗಿ'ಯ ನೆನಪಾಯಿತು. ಶಂಕ್ರಪ್ಪನೇ ಅಲ್ಲಿ ಕೂತಿದ್ದ. ಅದೊಂದು ಭವ್ಯ ಬಂಗಲೆ.

"ಓಹೊಹೊ—ಅಪರೂಪಂ ಚೋರದರ್ಶನಂ ಬಾರಯ್ಯಾ...." ಎಂದ. ಇವನ ಹತ್ತಿರಲೇ ನೌಕರಿಮಾಡಬೇಕೆ ನಾನೂ ಎಂದು ನಾಚಿದೆ. ಹಿಂದೊಮ್ಮೆ ಕಾಲೇಜು ಹಾಸ್ಟಲಿನಲ್ಲಿದ್ದಾಗ ಹೊಲೆಸಿದ ಸರ್ಜಸೂಟನ್ನೇ ಹಾಕಿಕೊಂಡಿದ್ದೆ. ಆಗ ಶಂಕ್ರಪ್ಪ ಹರುಕು ಜುಬ್ಬ ಹಾಕುತ್ತಿದ್ದ. ಈಗ ರೇಷ್ಮೆ ಜುಬ್ಬ ಜರೀ ಪಂಚೆ ಬಂಗಾರದ ಕಟ್ಟಿನ ಕನ್ನಡಕ ಹಾಕಿದ್ದ. "ಏನು ಬಂದದ್ದು" ಎಂದ.

"ಸೈಕಲ್ಲು ಮಾತ್ರ ಇಲ್ಲ" ಎಂದೆ. ಹಾಗನ್ನದೆ ವಿಧಿಯೇ ಇರಲಿಲ್ಲ—ಹಾಗೆ ಅಂದಾಗ ನಾಚಿದ್ದೆ.

"ಅಯ್ಯೋ ಪ್ರಾಣೀ... ....ನಿನಗೆ ಇನ್ನೂ ನೌಕರಿ ಇಲ್ಲವೇ....ನನಗೆ ಒಂದು ಮಾತು ಹೇಳಬಾರದಾಗಿತ್ತೇ....ಒಂದು ವಿಧದಲ್ಲಿ ನೀನೇ ನನ್ನ ಈಗಿನ ಈ ನೆಮ್ಮದಿ ಜೀವನಕ್ಕೆ ಕಾರಣ—ಅವತ್ತು ರಸ್ತೆ ಪಕ್ಕದಲ್ಲಿ ಹಸ್ತಸಾಮುದ್ರಿಕ ನೋಡಿದ ದಿನದಿಂದ ಶುಕ್ರದೆಸೆ ನನಗೆ ವಕ್ರಿಸಿತು. ಈ ಬಂಗಲೆ— ಆ ಕಾರು—ಎಲ್ಲಾ ಎಲೆಕ್ಷನ್ನಿನ ಸೀಸನ್ನಿನಲ್ಲಿ ಬಿಳೀಟೋಪಿಯವರಿಗೆಲ್ಲಾ ಹಸ್ತ ನೋಡಿ ಕೊಂಡದ್ದು. ಹೆದರಬೇಡ ನಿನಗೆ ಕೆಲಸ ನಾನು ಕೊಡ್ತೀನಿ—ಆದರೆ ಸೈಕಲ್ಲೂ ನಾನೇ ಕೊಡ್ತೀನಿ. ನಿನ್ನನ್ನ ಕಾರಿನಲ್ಲೇ ಓಡಾಡಿಸಬಲ್ಲೆ ಆದರೆ ನನ್ನ ಭವಿಷ್ಯ ಸುಳ್ಳಾಗಬಾರದು ನೋಡು—'ದ್ವಿಚಕ್ರೇ ಲೋಕ ಸಂಚಾರಿ' ದ್ವಿಚಕ್ರ ಸೈಕಲ್‌ಮೇಲೆ ಊರೆಲ್ಲಾ ತಿರುಗಿ ನನ್ನ ಭವಿಷ್ಯದ ಹಸ್ತಪತ್ರಿಕೆ —ನನ್ನ ಬಗ್ಗೆ ಪ್ರಚಾರ ಮತ್ತೆ ನನ್ನಂತೆ ಇರುವ ಇತರ ಸ್ವಜಾತಿ ಜನರ ದೂಷಣ ಭಾಷಣಮಾಡಬೇಕು. ನಿನ್ನ ವಾಚಾಳಿತನದಿಂದ ನನ್ನ ಗೆಲ್ಲಿಸಬೇಕು"

—ಎಂದು ಹೇಳಿದ. ಸಂಬಳ ಕೇಳಲಿಲ್ಲ—ಶಂಕ್ರಪ್ಪನ ಬಳಿ ಕೆಲಸಕ್ಕೆ ಸೇರಿದೆ. ಆದರೆ ಪಾಪಿ ಬಹಳ ಸೈಕಲ್ ತುಳಿಸುತ್ತಾನೆ—ಈ ಊರೊಂದೇ ಅಲ್ಲದೆ ಪಕ್ಕದ ಊರಿಗೂ ತುಳಿಸುತ್ತಾನೆ—ಆದರೆ ಅವನ ಮನೆ ಔಟ್‌ಹೌಸೇ ನಂದು. ಗಂಡಹೆಂಡ್ತಿ ಜಗಳವಿಲ್ಲದೆ ಉಂಡುಂಡು ಮಲಗ್ತಾ ಇದ್ದೇವೆ.

ದಾಶರಥಿ ದೀಕ್ಷಿತ್.

——o——

ಹೆಂಗಸರ ಹೆರಿಗೆ ಆಸ್ಪತ್ರೆಗಳಲ್ಲಿ ಹೆಣ್ಣುಮಕ್ಕಳನ್ನೇ ಹೆರಬೇಕು. ಗಂಡಸರ ಹೆರಿಗೆ ಆಸ್ಪತ್ರೆಗಳಲ್ಲಿ ಗಂಡುಮಕ್ಕಳನ್ನೇ ಹೆರಬೇಕು ಎಂಬ ಸಲಹೆ ಹೊರಟಿದೆಯಂತೆ.

—ಸಮಾನತೆ ಬೇಡವೆ ಸ್ತ್ರೀಪುರುಷರಿಗೆ.

*   *   *

# ನನ್ನ ಹುರಿಗಾಳಿನವಳು

ಕರಿಗೀರಿ ನಂಚಿನಾ
ಕೆಂಪೊಡಲ ಸೀರೆ
ನೆರಿಗೆ ಮೈಯನು ತೋರಿ
ಕಣ್ಣಿತವ ಬೀರೆ
ಉಡಿಯಂಚ ಮೇಲಿಂದೆ
ಮಡಿ ಬುಟ್ಟಿ ತೋರೆ
ಹಣೆಯಂಚ ಮೇಲೆಲ್ಲಾ
ಕೆಂಪಂಚು ಮುಸಕೆ.
ಎದ್ದು ಮೊಗದಲಿ ಮಿನುಗೆ
ತಾಸಿನಾ ಆಸೆ
ಚೆಲುವು ಹುರಿಗಾಳೊಡತಿ
ಬಾಯಿ ನೀರಾಡೆ
ಎದುರಿನಲಿ ಕಂಡಳಾ
ಮುದಿನಾರಿ ಮೈತ್ರಿಯಾ
ಹುರಿಗಾಳಿನವಳು.
ನೋಡಿದೆನು ಬುಟ್ಟಿಯನು
ಕಣ್‌ಸೆರೆಗೆ ಬಿತ್ತು
ನನ್ನ ಹುರಿಗಾಳಿನವಳೇ!
ನಿನಗೆಣೆಯೆ ಇಲ್ಲ.

ಉಡುಪಿಯವ ಸಿಂಧಿಯವ
ಪಾಲ್ಘಾಟನವ ಕೂಡ
ನಿನ್ನ ಕೃತಿ ಕಾಳ ನೋಡಿ
ಬೆರಗಾಗಿ ನಿಂದಿಹರು!
ಭಲೆ! ಕೀರ್ತಿ ಹುರಿಗಾಳು
ನಿಂದಲ್ಲ ದಿನ್ನಿಲ್ಲ.
ಹೋಟಲೂಟದಿ ನೊಂದ
ಬಳಲಿ ಬೆಂಡಾದ
ನಾಲಿಗೆಯು ಕಾಯುತಿದೆ
ನಿನ್ನ ಬರವನ್ನೇ
ಕಣ್ಗೆ ಸಂತಸ ನೀಡಿ
ಮನೆಯ ಶಾಂತಿಯನಿತ್ತು
ಚಪಲ ಸೊಂಪುಗಳೆರಡು
ಬೆರೆಯಿತೊಂದಾಗಿ
ಬಂದಿರುವೆ ನೀನೆನಗೆ
ಅನ್ನಪೂರ್ಣೆಯಾಗಿ
ನಿಂದಿರುವೆ ಕಣ್ಮುಂದೆ
ಹುರಿಗಾಳ ತಾಯಿ!

“ನನ್ನವಳು”. ಕುವೆಂಪು. “ಜೇನಾಗುವಾ” ಪುಟ: ೧೬.

—o—

# ನಮ್ಮ ರಾಮಾಯಣ

ರಾಜೀವಪುರದ ಕೊರಕಲಾಚೆ ಹೋಬಳಿಯಲ್ಲಿ ಸಾಹುಕಾರ್ ದಶರಥಾಚಾರ್ಯನ ಹೆಸರನ್ನು ಕೇಳದವರೇ ಇಲ್ಲ. ಸಾಹುಕಾರರು ಹಣವಂತರು, ಹಳ್ಳಿಯ ಜನರನ್ನೆಲ್ಲಾ ತಮ್ಮ ದಯಾದಾಕ್ಷಿಣ್ಯಕ್ಕೆ ಒಳಪಡಿಸಿಕೊಂಡಿದ್ದರು. ೬೦ ವರ್ಷದ ಪ್ರಾಯದವರಾಗಿದ್ದರಿಂದ ಎಲ್ಲರ ಮರ್ಯಾದೆಗೂ ಮನ್ನಣೆಗೂ ಪಾತ್ರರಾಗಿದ್ದರು

ಮೊದಲ ಇಬ್ಬರು ಹೆಂಡತಿಯರಿಗೆ ಮಕ್ಕಳಿಲ್ಲವೆಂಬ ಕೊರತೆಯನ್ನು ನೀಗುವ ಸಲುವಾಗಿ, ತಮ್ಮ ೫೮ರ ವಯಸ್ಸಿನಲ್ಲಿ ಮೂರನೆಯ ಮದುವೆಯನ್ನು ಮಾಡಿಕೊಂಡು, ವಂಶೋದ್ಧಾರಕ್ಕಾಗಿ ೪ ಗಂಡುಮಕ್ಕಳನ್ನು ಪಡೆದಿದ್ದರು—ಒಂದೇ ವರ್ಷದಲ್ಲಿ—ಮೂವರು ಹೆಂಡಿರಲ್ಲೂ—

ಮೊದಲನೆಯವ ಶ್ರೀರಾಮಾಚಾರಿ. ೨೨ ವರ್ಷ, ಪಟ್ಟಣದಲ್ಲಿ ಬಿ.ಎಸ್‌ಸಿ. ಮಾಡಿದ್ದ. ಇಂಗ್ಲೆಂಡಿಗೆ ಹೋಗಿ ಮುಂದಿನ ವ್ಯಾಸಂಗ ಮಾಡಿಯೇ ಬಿಡಬೇಕು ಎಂದು ಹಠ ಹಿಡಿದಿದ್ದ. ರಾಯರಿಗೆ ಮೊದಲ ಮಗನನ್ನು ದೂರದೇಶ ಕಳಿಸಲು ಇಷ್ಟವಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಅಷ್ಟು ಹಣ ಖರ್ಚುಮಾಡಲು ಮನಸ್ಸಿಲ್ಲ ಆದರೆ ಮೊದಲ ಸೊಸೆ ಸೀತಾಬಾಯಿಯೂ ಹಠ ಹಿಡಿದು ಹೇಳಿದಳು. "ಯಜಮಾನರೊಂದಿಗೆ ನಾನೂ ಇಂಗ್ಲೆಂಡಿಗೆ ಹೋಗಲೇಬೇಕು. ನಾನಿಲ್ಲದೆ ಅವರು ಅಲ್ಲಿಗೆ ಹೋದರೆ, ಹಿಂತಿರುಗುವಾಗ ಅವರಿಗೂ ಇಬ್ಬರು ಹೆಂಡತಿಯರು ಆಗಿಬಿಡಬಹುದು. ಅವರ ಕಪಟ, ಅವರ ಮಾಯಾಜಾಲ, ಅವರ ಮಂತ್ರದ ಮಾತುಗಳನ್ನು ನಾನು ನೋಡಿ ಕೇಳಿದ್ದೇನೆ. ಅದಕ್ಕೇ ನಾನೂ ಅವರೊಡನೆ ಹೋಗಲೇಬೇಕು. ಹೇಗೂ ನಮ್ಮ ಸೋದರಮಾವ ಕನಕಾಚಾರ್ರು ಅರಿಶಿನ ಕುಂಕುಮಕ್ಕೆಂದು ನನಗೆ ಹತ್ತು ಸಾವಿರ ಬಳುವಳಿ ಬಿಟ್ಟಿದ್ದಾರೆ. ನನ್ನ ಅರಿಶಿನ ಕುಂಕುಮ ಉಳಿಸಿಕೊಳ್ಳಲು ಆ ಹಣವನ್ನೇ ಖರ್ಚುಮಾಡಿದರೆ, ಈ ಮನೆಯ ಕಾಸು ಪೋಲಾಗುವುದಿಲ್ಲ" ಎಂದು.

ದಶರಥಾಚಾರ್ರು ಈಗ "ಉಹ್ಞೂ" ಎನ್ನಲು ಸಮಂಜಸವಾದ ಕಾರಣವೇನೂ ಇರಲಿಲ್ಲ. ಹಾಗಾಗಿ ಅರ್ಧ ಮನಸ್ಸಿನಿಂದ 'ಹ್ಞೂ' ಅಂತ ತಲೆದೂಗುವ ಹೊತ್ತಿಗೆ, ಶ್ರೀರಾಮಾಚಾರ್ರು ಮುಂಜಾಗ್ರತೆಯಿಂದ "ಅಲ್ಲಾ! ಅಪ್ಪಾ! ಇಂಗ್ಲೆಂಡಿಗೆ ಈಕೇನೂ ಬರ್ತೀನಿ ಅಂತ ಹಠಹಿಡಿದಿದ್ದಾಳೆ. ಕಾರಣ ಅಲ್ಲಿ ನಾನು ಅಡ್ಡಹಾದಿ ತುಳಿತೀನೇನೋ ಅಂತ. ಆದರೆ ಈಕೀ ಮಾತಿನ ಮಾಟ ನಾನು ಕೇಳಿದ್ದೇನೆ, ಹೂಡುವ ಜಾಲದಲ್ಲಿ

ಸೆರೆಬಿದ್ದಿದ್ದೇನೆ, ಆಡಿಸಿದಂತೆ ಆಡಿದ್ದೇನೆ, ಈಕೀನ ಅಲ್ಲಿಗೆ ಕರೆದುಕೊಂಡುಹೋದರೆ ಈಕೀನ ನೋಡಿಕೊಳ್ಳುವುದೇ ಪೂರ್ಣ ಕೆಲಸವಾಗಿಬಿಡುತ್ತೆ. ಓದುವುದಕ್ಕಾಗಲೀ, ಕಲಿಯುವುದಕ್ಕಾಗಲೀ, ವಿರಾಮವಾಗಲೀ, ಅವಕಾಶವಾಗಲಿ ಸಿಗುವುದೇ ಇಲ್ಲ ಅಂದಮೇಲೆ ಈಕೀನ ಕರಕೊಂಡು ಹೋಗುವುದು ಬೇಡ. ಆದರೆ ಈಕಿ ಹಣ ತೆಗೆದು ಕೊಂಡು ಹೋಗ್ತೀನಿ. ಅದೇ ಈಕಿ ಕುಂಕುಮಾನ ಕಾಯುತ್ತೆ" ಎಂದು ಹೇಳಿ ಯಾರಿಗೂ ಕಾಣದಂತೆ ತೊಡೆ ತಟ್ಟಿಕೊಂಡ.

ದಶರಥಾಚಾರ್ರು ಶಹಭಾಸ್ ಮಗನೇ ಎಂದು ಮನಸ್ಸಿನಲ್ಲಿಯೇ ಅಂದು ಕೊಂಡರು ಸೀತಾಬಾಯಿ, ಹೊಟ್ಟೀನ ಹಿಂಡಿಕೊಂಡಳು-- ಕಿಚ್ಚನ್ನು ಅಡಗಿಸಲು —ಆಗ ಮೂರನೆಯ ಮಗ ಎಸ್.ಎಸ್.ಎಲ್ ಸಿ.ಯಲ್ಲಿ ಮೂರು ವರ್ಷದಲ್ಲಿ ಆರು ಬಾರಿ ನಪಾಸಾದವ ಅಂದ. "ಅಪ್ಪಾ ನಾನೂ ಇವರೊಡನೆ ಇಂಗ್ಲೆಂಡಿಗೆ ಹೋಗ್ತೀನಿ. ಅಣ್ಣ ಅತ್ತಿಗೆಯರಿಗೆ ನೆರವಾದ್ಹಾಗೂ ಆಯಿತು. ಅಲ್ಲೇ ಎಲ್ಲಾದರೂ ಫ್ಯಾಕ್ಟರೀಲಿ ಕೆಲಸಮಾಡಿ, ಹಿಂತಿರುಗಿದರೆ ಇಲ್ಲಿ ಭಾರಿ ಕೆಲಸ ಸಿಕ್ಕೇ ಸಿಗುತ್ತೆ. ಅಲ್ಲದೆ ಈ ಊರ ವರ ಮುಖ ನೋಡುಕ್ಕೆ ಈಗೀಗ ಸ್ವಲ್ಪ ನಾಚಿಕೆಯಾಗುತ್ತೆ" ಎಂದು.

"ಲಕ್ಷಣವಾಗಿ ಮಾತಾಡಿದೆಯಪ್ಪಾ ಲಕ್ಷ್ಮಣಾ" ಎಂದು ಹೊಗಳಿದಳು ಸೀತಾ ಬಾಯಿ. ಮೊದಲಿನವನ ಚಾತುರ್ಯಕ್ಕೆ ಪ್ರತಿ ಚತುರತೆ ಹೂಡಬೇಕಾದರೆ ಮೂರನೆ ಯವನೇ ಸೈ ಎಂದು ತಂದೆ ಮನಸ್ಸಿನಲ್ಲಿಯೇ ಮೆಚ್ಚಿಕೊಂಡರು.

"ಹ್ಞೂ" ಎಂದು ತೀರ್ಮಾನವಾಯ್ತು.

ಶ್ರೀರಾಮಾಚಾರ್ರು, ಸೀತಾಬಾಯಿ, ಲಕ್ಷ್ಮಣ ಮೂವರು ಅಂಗಡಿ ಅಂಗಡಿ ಸುತ್ತಿ ನಾರುಮಡಿ ಬಟ್ಟೆಗಳನ್ನು ಕೊಂಡು ಉಡುಪು ಹೊಲಿಸಿಕೊಂಡರು. ಅಮೇರಿಕಾ ದಿಂದ ಬಂದ ಈ ಬಟ್ಟೆ ಒಳಗೆ ನಯವಾಗಿಯೂ ಹೊರಗೆ ರೇಗಿದ ಮುಳ್ಳುಹಂದಿ ಯಂತೆಯೂ, ಮುಖ್ಯ ಸಾಕ್ಷಾತ್ ರಾಕ್ಷಸ ಮಗುವೇ ಕೋಪದಿಂದ ನೇಯ್ದ ಖಾದಿ ಬಟ್ಟೆಯಂತೆ ಕಾಣುತ್ತಲಿತ್ತು.

ಕಾಣದ ಊರಿಗೆ ಹೋಗುವಾಗ, ಸಾಚಾ ಒಡವೆ ವಸ್ತುಗಳು ಬೇಡವೆಂದು, ಕೃತಕ ಒಡವೆಗಳನ್ನು ಮಾಡಿಸಿಕೊಂಡರು. ಹಳ್ಳಿಗರ ಹಾಡು ಕಲಿತರು, ಹಳ್ಳಿಯ ಕುಣಿತವನ್ನು ಅಭ್ಯಾಸಮಾಡಿಕೊಂಡರು. ಇಂಗ್ಲೆಂಡಿನಲ್ಲಿ ಇವನ್ನು ಪ್ರದರ್ಶಿಸಿದರೇ ಅಲ್ಲವೇ ಹಿಂದಿರುಗಿದಮೇಲೆ ಇವರಿಗೆ ನಮ್ಮೂರಿನಲ್ಲಿ ಮಾನ್ಯತೆ, ದೊರೆಯಬೇಕಾದ್ದು!

ಎಲ್ಲ ಏರ್ಪಾಡುಗಳೂ ಸಿದ್ಧವಾಗಿ ಶನಿವಾರ ಬೆಳಿಗ್ಗೆ ಮೂವರೂ ತಂದೆ ತಾಯಂದಿರನ್ನು ಬೀಳ್ಕೊಟ್ಟು ಇಂಗ್ಲೆಂಡಿಗೆಂದು ಬೊಂಬಾಯಿಗೆ ಹೊರಟೇಬಿಟ್ಟರು.

ಆ ಮಧ್ಯಾಹ್ನ ದಶರಥಾಚಾರ್ಯರು, ಮನೆ ಬಿಕೋ ಎಂದನ್ನುತ್ತಿದ್ದ ಕಾರಣ, ಮಲಗಿದ್ದ ಮಂಚದ ಕೆಳಗಡೆಯಿಂದ ಸಂದೂಕವನ್ನು ಸೆಳೆದರು. ಜನಿವಾರದಲ್ಲಿದ್ದ

ಬೀಗದಕೈಯಿನಿಂದ ಸಂದೂಕವನ್ನು ತೆರೆದರು. ಸಂದೂಕ ಖಾಲಿ. "ಅಯ್ಯೋ!" ಎಂದು ಒಂದು ಚೀತ್ಕಾರ ಹಾಕಿದರು. "ಅಯ್ಯಯ್ಯೋ!!" ಎಂದು ಸಂದೂಕ ಬಿರಿಯುವಂತೆ ಬೊಬ್ಬೆಯಿಟ್ಟರು ಕಣ್ಣೊರೆಸಿಕೊಂಡು ತಿರುಗಿ ಸಂದೂಕ ನೋಡಿದರು. ಸಂದೂಕದ ತಳದಲ್ಲಿ ತಳವೇ ಇಲ್ಲದಿದ್ದುದು ಕಂಡಿತು. ಅಯ್ಯೋ! ಇದರಲ್ಲಿದ್ದ ಸವರನ್ನುಗಳೆಲ್ಲಾ ಮಂಚದ ಕೆಳಗೇ ಇರಬೇಕು ನೋಡೋಣ ಎಂದು ಕುಳಿತಲ್ಲಿಂದಲೇ ಮಂಚದ ಕೆಳಗೆಲ್ಲಾ ಕೈಯಾಡಿಸಿದರು. ಬರೀ ಧೂಳು ಮಾತ್ರ ಕೈಗೆ ತಾಕಿತು. ಹಾಸಿಗೆಯ ಕಂಬಳಿಯಿಂದ ಬಿದ್ದ ತುಪಟದ ತುಣುಕು ಸಿಕ್ಕಿತು. ಹಿಂತಿರುಗಿ ಕೈ ತೆಗೆದುಕೊಳ್ಳಬೇಕು! ಏನೋ? ಬೆರಳನ್ನು ಕುಟಕಿದಂತಾಯ್ತು. ಬೇಗ ಕೈ ಸೆಳೆದು ಕೊಂಡರು. ಬಾಲ್ಯದ ಅಭ್ಯಾಸಬಲದಿಂದ ಬೆರಳನ್ನು ಬಾಯಿಗೆ ಇಟ್ಟುಕೊಂಡರು. ಆ ವೇಳೆಗೆ ಮಂಚದ ಕಡೆಯ ಗೋಡೆಯಮೇಲೆ ಮಂಡರಗಪ್ಪೆಯೊಂದು ಸೂರಿನ ಕಡೆಗೆ ಬೇಗ ಬೇಗ ಓಡುತ್ತಿದುದನ್ನು ಕಂಡರು— ಇದನ್ನು ಕಂಡಮೇಲೆ—

ಬೆರಳಿನ ಛಳುಕು ಹೆಚ್ಚಾಯ್ತು. ಬೊಬ್ಬೆ ಬಾರಿಸಿದರು. ಈ ಭಯಂಕರ ಬೊಬ್ಬೆಯನ್ನು ಕೇಳಿ ಕೊರಕ್ಲಾಚೆ ಹೋಬಳಿಯ ಗದ್ದೆ ಹೊಲದಲ್ಲಿ ಕೆಲಸಮಾಡು ತ್ತಿದ್ದವರೂ ಕೂಡ ಓಡಿಯೋಡಿ ಬಂದರು.

"ಅಯ್ಯೋ! ಶ್ರೀರಾಮ, ಪಿತೃಭಾಗ್ಯ ಕೊಂಡೊಯ್ದೆಯಲ್ಲೋ! ಪರಮ ವಂಚನಾ! ತಂದೆಗೆ ತಿರುಮಂತ್ರ ಹೇಳೀಬಿಟ್ಟೆಯಲ್ಲೋ! ಅಯ್ಯೋ! ಹಯ್ಯೋ! ಈ ಚೇಳು ನಿನ್ನನ್ನು ಕುಟುಕಬಾರದಾಗಿತ್ತೇನೋ" ಎಂದು ಕೂಗುತ್ತಾ, ನೋವಿ ನಿಂದಲೂ, ಕೊರಗಿನಿಂದಲೂ, ಕೂಗಿ ಕೂಗಿದ ಸುಸ್ತಿನಿಂದಲೂ, ದಶರಥಾಚಾರ್ಯರು ಕೂಡಲೇ ಪ್ರಾಣಬಿಟ್ಟರು.

ನಮ್ಮ ಮನೆಗಳಲ್ಲಿ ಇದ್ದವರು ಎಬ್ಬಿಸುವ ಗದ್ದಲಕ್ಕಿಂತ ನೂರರಷ್ಟು ದೊಡ್ಡ ಗದ್ದಲವನ್ನು ಸತ್ತವರು ಎಬ್ಬಿಸುತ್ತಾರೆ. ಸಾಹುಕಾರರ ಮನೆ ಸಂತೆಯಾಯ್ತು. ಅಜೂಬಾಜೂ ಹಿರಿಯರು "ಮುಂದಿನ ಕೆಲಸಕ್ಕೆ ಮೊದಲಮಗ ಬರುವಂತಿಲ್ಲ! ನೆರೆ ಹಳ್ಳಿಯಲ್ಲಿ ಮಾವನಮನೆಗೆಂದು ಹೋಗಿರುವ ಎರಡನೆಯಮಗ ಭರತರಾಯನನ್ನು, ಗಿಳಿಯನಾಗಿ ಹೋಗಿರುವ ಶತ್ರುಘ್ನನನ್ನೂ, ಮಂದಿ ಕಳಿಸಿ ತಕ್ಷಣ ಕರೆಸಬೇಕು. ತದನಂತರವೇ ಮುಂದಿನ ಕಾರ್ಯಕ್ರಮಗಳೆಲ್ಲಾ" ಎಂದು ನಿರ್ಧರಿಸಿದರು

ಸಂಜೆ ಎಂಟುಗಂಟೆಯ ಹೊತ್ತಿಗೆ ಹಳ್ಳಿ ತಟ್ಟು ಹತ್ತಿಕೊಂಡು ಭರತರಾಯನೂ, ಶತ್ರುಘ್ನನೂ ಬಂದಿಳಿದರು. ಅವಸರ ಅವಸರದಲ್ಲಿ ಬಲು ಭಾರ ಹೊತ್ತು ಬಂದಿದ್ದ ಆ ಕುದುರೆ, ಇವರಿಬ್ಬರೂ ಇಳಿಯುತ್ತಲೂ ಬೆನ್‌ಬಲವೇ ಹೋದಂತಾಗಿ ಅಲ್ಲಿಯೇ ಅದೂ ಪ್ರಾಣಬಿಟ್ಟಿತು. "ದಶರಥಾಚಾರ್ಯರ ಕುದುರೆ ಯಜಮಾನ ಸತ್ತಿದ್ದನ್ನು ಕಂಡು ಅದೂ ಅಸುವನ್ನು ನೀಗಿತಲ್ಲಾ" ಎಂದು ಜನ ಹೇಳಲಾರಂಭಿಸಿದರು. ಬೆನ್ನಿನ

ಮೇಲಿದ್ದ ಭಾರ ಹಠಾತ್ತನೆ ಇಳಿದಾಗ ಬೆನ್ನೆಲುಬು ಸ್ಪ್ರಿಂಗಿನಂತೆ ಮೇಲಕ್ಕೆ ಹಾರಿ, ಒಡೆದು ಪ್ರಾಣಬಿಟ್ಟಿದ್ದು ಯಾರಿಗೂ ತಿಳಿಯಲೇ ಇಲ್ಲ!

ಮುಂದಿನ ಕಾರ್ಯಕ್ರಮ ಆರಂಭವಾಯ್ತು. ಬರೀಗಾಲಿನಲ್ಲಿ ಸ್ಮಶಾನದತನಕ ನಡೆದುಹೋದ ಭರತರಾಯನಿಗೆ ಚಾಪೆಮುಳ್ಳಿನ ಬಾಧೆ ತೀವ್ರವಾಗಿ ತಟ್ಟಿತು. "ಅಂದಹಾಗೇ! ಅಪ್ಪನ ಚಪ್ಪಲಿ ಎಲ್ಲಿ? ಕಾಣಲೇ ಇಲ್ಲವಲ್ಲ" ಎಂದ ಭರತರಾಯ!

"ಶ್ರೀರಾಮಾಚಾರ್ರು ಅದನ್ನು ಇಂಗ್ಲೆಂಡಿಗೆ ತೆಗೆದುಕೊಂಡುಹೋದರು" ಎಂದು ತಿಳಿಸಿದ ಮಂಥರಮೂರ್ತಿ—ಅಪ್ಪನ ಆಪ್ತ ಕಾರ್‌ಖೂನ—ಅಂದರೆ ಡ್ರಾಯ್ವರ.

"ಏನು! ಶತ್ರುಜ್ಞ, ಅಪ್ಪನ ಚಪ್ಪಲಿಯಲ್ಲಿ ಮಕ್ಕಳಿಗೆಲ್ಲಾ ಒಂದೇ ತೆರನಾದ ಹಕ್ಕಿದೆಯಲ್ಲವೇ?" ಎಂದು ಕೇಳಿದ ಭರತರಾಯ.

"ಇಲ್ಲದೇ ಉಂಟೆ?" ಎಂದು ಉತ್ತರ ಕೊಟ್ಟ ಶತ್ರುಜ್ಞ.

ದಹನ—ಸಂಚಯನ—ಎಲ್ಲವೂ ಮುಗಿಯಿತು. ೭ನೇ ದಿನ ಶ್ರೀರಾಮಾಚಾರ್ರ ವಿಳಾಸಕ್ಕೆ ಇಂಗ್ಲೆಂಡಿಗೆ ತಂತಿಯೂ ಕೊಡಲ್ಪಟ್ಟಿತು. "ಹೀಗೆ ಹೀಗೆ ಆಯಿತು, ಕೂಡಲೆ ಚಪ್ಪಲಿಯನ್ನು ವಾಪಸು ಕಳಿಸು, ಆಸ್ತಿ ತೆರಿಗೆಯವರಿಗೆ ಅದನ್ನು ಒಪ್ಪಿಸಬೇಕು. ಸಂದೂಕದ ಹಣದ ಸುದ್ದಿ ಎತ್ತಬೇಡ. ಮುಗುಮ್ಮಾಗಿದ್ದರೆ—ನಿಂದು ನಿಂದೇ, ನಂದು ನಂದೇ. ಸರ್ಕಾರಕ್ಕೆ ತಿಳಿದರೆ ಎಲ್ಲವೂ ಅವರದೇ!!" ಎನ್ನುವ ತಂತಿ.

ಧರ್ಮೋದಕ—ವೈಕುಂಠ ಸಮಾರಾಧನೆ—ಶುಭ ಸ್ವೀಕಾರ ಎಲ್ಲವೂ ಪುರೋಹಿತರು ಹೇಳಿದಂತೆ ಮುಗಿಯಿತು.

ಅನಂತರ ಭರತರಾಯ ಶತ್ರುಘ್ನಮೂರ್ತಿ ಒಂದು ತಿಂಗಳು ಕುಳಿತು, ಮಂಥರ ಮೂರ್ತಿಯ ಕೈಲಿ ಸಾಹುಕಾರರ ಆಸ್ತಿಪಾಸ್ತಿಗಳ, ಸಾಲಸೋಲಗಳ ಲೆಕ್ಕ ಬರೆಸಿದರು. ಮಕ್ಕಳುಗಳು ಸುಮಾರು ೬೦೦೦ ಸಾಲ ತೀರಿಸಬೇಕು ಎನ್ನುವ ಸತ್ಯ ಹೊರಬಿದ್ದಿತು. ಲೆಕ್ಕ ಬರೆಯಿಸುವಾಗ ಹೊರಬಿದ್ದ ಸತ್ಯಾಂಶಗಳನ್ನು ನೋಡಿ ಭರತರಾಯ ತಮ್ಮನಿಗೆ "ಶತ್ರೂ! ಆಂಜನೇಯನ ಗುಡಿ ಹರಿಕಥೆಗೆ ಬರೋರಿಗೆಲ್ಲಾ ಆಸ್ತಿ ಹಂಚಿದ ಅಪ್ಪ, ಸಾಲವನ್ನೂ ಅವರಿಗೆಲ್ಲಾ ಹಂಚಬಾರದಾಗಿತ್ತೇ?" ಎಂದು.

ಈ ಲೆಕ್ಕವನ್ನೇ ಸರಕಾರಕ್ಕೂ ಒಪ್ಪಿಸಿದರು—ಸರಕಾರವೂ ಒಪ್ಪಿತು. ಭರತರಾಯ ಈ ಲೆಕ್ಕದ ವರದಿ ಒಪ್ಪಿಸುತ್ತಾ ಅಣ್ಣನಿಗೆ ಒಲುಮೆಯ ಕಾಗದ ಬರೆದ— "ನಿನ್ನ ಭಾಗದ ಪಿತೃಋಣವನ್ನು ನೀನು ತೀರಿಸು; ಅತ್ತಿಗೆ ಚೆನ್ನಾಗಿದ್ದಾರಾ? ಲಕ್ಷ್ಮಣನಿಗೆ ಆಶೀರ್ವಾದ ತಿಳಿಸು. ಇದನ್ನು ನೋಡಿದಮೇಲೆ ನಾನು ಎಲ್ಲಿದ್ದೇನೆ ಎನ್ನುವುದು ಊಹೆಗೆ ಸುಲಭ! ಮಾವನಮನೆಯೇ ಗತಿ!!" ಎಂದು.

ಭರತರಾಯನಿಗೆ ಮಾವನಮನೆಯ ವಿಳಾಸಕ್ಕೆ ಹತ್ತು ದಿನಗಳಲ್ಲೇ ರೆಕ್ಕೆಯ ಅಂಚೆಯ ಮೂಲಕ ಅಣ್ಣನ ಉತ್ತರ ಬಂದಿತು.

“ಭರ್ತರಾಯ! ನೀನು ಬರೆದ ಕಾಗದ ಬಂತು ಆಫ್ರಿಕಾದಲ್ಲಿ ಪ್ರವಾಸ ಚೆನ್ನಾಗಿತ್ತು. ನಾವು ಇಂಗ್ಲೆಂಡಿನ ಈ ವಿಳಾಸಕ್ಕೆ ಹೋದವಾರ ಬಂದೆವು—ಸೌಮಿತ್ರಿ ಲಕ್ಷಣವಾಗಿ, ನೂರು ಸ್ನೇಹಿತೆಯರೊಡನೆ ಮಾಯವಾಗಿದ್ದಾನೆ. ನಿನ್ನ ಅತ್ತಿಗೆಯನ್ನು ಚಲನ ಚಂಚಲ ಚಿತ್ರ ರಾವಣ ಹಾರಿಸಿಕೊಂಡು ಹೋಗಿದ್ದಾನೆ. ಯಾವ ಕಾರ್ಪಣ್ಯವೂ ಇಲ್ಲದೆ, ಸಂದೂಕಿನ ಹಣದ ನೆರಳಿನಲ್ಲಿ ನಾನು ರಾಮರಾಜ್ಯ ಸುಖ ಅನುಭವಿಸುತ್ತಿದ್ದೇನೆ. ಈ ಕಾಗದದ ಜತೆಗೆ ಅಪ್ಪನ ಚಪ್ಪಲಿ ವಾಪಸುಮಾಡಿದ್ದೇನೆ. ಅದರಲ್ಲಿ ನನಗೆ ಯಾವ ಭಾಗವೂ ಬೇಡ!

ಭರತರಾಯ ಆ ಚಪ್ಪಲಿಯ ಪಾರ್ಸಲನ್ನೂ ಅಣ್ಣನ ಕಾಗದವನ್ನೂ ನೋಡಿದ —ಶಿರಸಾವಹಿಸಿದ—ಅದೇ ಮಾದರಿಯ ಚಪ್ಪಲಿಯನ್ನು ತಾನೂ ತಯಾರಿಸಿದ— ಸ್ವದೇಶೀ—ಸ್ವಹಸ್ತ—ಸ್ವಚರ್ಮ—ಸ್ವಂತ ಬೆವರು ಎಂದು ಶತ್ರುಘ್ನ ಘೋಷಿಸಿದ.

ಭರತರಾಯ ಶತ್ರುಜ್ಞ ಇಬ್ಬರೂ ಕೂಡ ಮಾವನಮನೆಯಲ್ಲಿದ್ದರೂ ರಾಮ ರಾಜ್ಯದ ಸುಖ ಅನುಭವಿಸಿದರು—



ಕಣ್ಣಾಸ್ಪತ್ರೆ ದಾರಿ ಯಾವುದ್ರೀ!!

# ಕೊರವಾವಲೋಕನ

ಬ್ರಾಹ್ಮಣರ ಮನೆ ಅಂಗಳದಲ್ಲಿ ಈಚೀಚಿಗೆ, ಅಲಂಕಾರಕ್ಕೆಂದು, ಮೀನಿನ ಕೊಳವೊಂದನ್ನು ಗಾಜಿನಲ್ಲಿ ಮಾಡಿಸಿ ೨ ಅಂಗುಲ ೩ ಅಂಗುಲ ಉದ್ದದ ಬಣ್ಣಬಣ್ಣದ ಮೀನುಗಳನ್ನು ಸಾಕುವುದು ವಾಡಿಕೆಯಾಗಿದೆ. ಕೆರೆ ದಡದಮೇಲೆ ಹರೆಯ ವಯಸ್ಸಿನವರು ತಂಪುಹೊತ್ತಿನಲ್ಲಿ ಗಾಳಿ ಸಂಚಾರಕ್ಕೆಂದು ಕೆರೆ ದಡದಮೇಲೆ ಕುಳಿತು ಕಾಲ ಕಳೆಯುವುದಿಲ್ಲವೇ? ಅದೇ ರೀತಿ ಈ ಮೀನಿನ ಕೊಳದಬಳಿ ಕುಳಿತು ಮೀನಿನ ಕಣ್ಣುಗಳನ್ನು, ಅವುಗಳು ತಾರಾಡುವುದನ್ನೂ ನೋಡುತ್ತಾ ಕುಳಿತರೆ, ಮೀನಾಕ್ಷಿ ಎಂದು ಮಧುರೆಯ ದೇವತೆಗೆ ಹೆಸರೇಕೆ ಇಟ್ಟರು ಎನ್ನುವುದು ಸುಲಭವಾಗಿ ಅರ್ಥವಾಗುತ್ತೆ.

ಆಷಾಢ ಅಮಾವಾಸ್ಯೆ, ಸುಮಾರು ೭ ಗಂಟೆಯಿರಬಹುದು. ಹುಲ್ಲುಗಾವಲಿನ ಕಡೆಯಿಂದ ಧೌಡುತ್ತಾ, ಕ್ಲಬ್ಬಿನೊಳಕ್ಕೆ ಅರವಾಮುದ್ದು ಬಂದ. ಬಂದವನೇ ಕುರ್ಚಿಯೊಳಕ್ಕೆ, ಬಿದ್ದ. ಬಿದ್ದು ಹಣೆವರೆಸಿಕೊಂಡ. ನಂತರ ಅವನ ಮುಖ ಕಂಡಿತು, ಸುತ್ತಲೂ ಕುಳಿತಿದ್ದ ನಮಗೆಲ್ಲಾ!

ಮೀನಿನ ಕೊಳದಲ್ಲಿ, ದೊಡ್ಡ ಮೀನನ್ನು ಕಂಡ ಸಣ್ಣಮೀನು ಯಾವ ರೀತಿ, ತನ್ನ ಭವಿಷ್ಯವನ್ನು ಊಹಿಸಿಕೊಂಡು ಸಪ್ಪೆಮುಖ ಹಾಕಿಕೊಂಡಿರುತ್ತೋ, ಆ ರೀತಿಯ ಮುಖ ಅರವಾಮುದ್ದುವಿಗಿತ್ತು.

ಕೊರವ ಚಪ್ಪಲಿಯನ್ನು ಕಳಚಿ ಅಂಗಾಲು ಕೆರೆದುಕೊಂಡ. ನಂತರ ಕನಿಕರದಿಂದ ಚಪ್ಪಲಿಹಸ್ತನಾಗಿಯೇ, ಅರವಾಮುದ್ದುವನ್ನು "ಏಕಯ್ಯಾ! ಈ ಮುಖವಾಡ! ಬರಬಾರದ್ದೇನು ಬಂದು ತಾಕಿತೆ ನಿನಗೆ" ಎಂದು ಕೇಳಿದ.

ಗೋಗರೆವ ಮುಖದಿಂದ, ಗೋಗರೆವ ದನಿಯಲ್ಲಿ, ಚಪ್ಪಲಿಯನ್ನೇ ನೋಡುತ್ತಾ "ಮಳೆಗೆ ಶುರುವಾಗಿದೆ, ನನ್ನ ಹೆಂಡತಿ ಚಿಕ್ಕಪೇಟೆಗೆ ಹೋಗಿದ್ದಾಳೆ" ಎಂದ ಅರವಾಮುದು ಮೊಗಮ್ಮಾಗಿ.

"ನಿನ್ನ ಮೀನಾಕ್ಷಿ ಮಳೆ ಬಂದರೆ, ಹತ್ತಿರ ಇರುವ ಅಂಗಡಿಗೆ ಹೋಗುವಷ್ಟು ಜಾಣೆಯಲ್ಲವೇ? ಅಥವಾ ಹೆಸರಿಗೆ ತಕ್ಕಂತೆ ಮಳೆಯಲ್ಲಿ, ಚಿಕ್ಕಪೇಟೆ ಚರಂಡೀಲಿ, ಹರಿವ ನೀರಲ್ಲಿ, ಈಜಾಡುತ್ತಾಳೆ ಅಂತ ನಿನಗೆ ಹೆದರಿಕೆಯೇ" ಎಂದ ಕೊರವ, ಕ್ರೂರವಾಗಿ.

ಅರವಾಮೊದ್ದು ಆಗ ಕೀಳ್‌ದನಿಯಲ್ಲಿ ಹೇಳಿದ, "ಮಳೆ ನೆಪದಲ್ಲಿ ಅಂಗಡಿಗೆ ಹೋಗೇ ಹೋಗ್ತಾಳೆ. ಅದಕ್ಕೇ ನನಗೆ ಹೆದರಿಕೆ! ಚರಂಡಿ ನೀರಿನಲ್ಲಿ ಈಜಾಡಿದರೆ ಎಷ್ಟೋ ವಾಶಿ. ನಾನು ಪಾಪರಾಗುಲ್ಲ" ಎಂದ.

ಅರವಾಮೊದ್ದುವಿನ ಎರಡನೆ ವಾಕ್ಯ ಕೊರವನಿಗೆ ಕಟ್ಟುಬಿದ್ದುದು ಕಂಡು ನಾವೆಲ್ಲಾ ಹಿಗ್ಗಿ, ಹೀರೆಕಾಯಿಬೋಂಡ ತರಿಸಿ ತಿಂದೆವು.

* * *

ಶನಿವಾರ ಸಾಯಂಕಾಲ ನಮ್ಮ ಶಾಮು ಕ್ಲಬ್ಬಿಗೆ ಬಂದಿದ್ದ. ಈಗ ಮೂರು ತಿಂಗಳಿಂದ ಶಾಮು ದೆಹಲಿಗೆ ಹೋಗಿ ಸುಪ್ರೀಂ ಕೋರ್ಟಿನಲ್ಲಿ ಲಾಯರಾಗಿದ್ದಾನೆ. ಬಲು ಜಾಣ ಶಾಮು, ತಿಂಗಳಿಗೆ ಹತ್ತುಸಾವಿರ ಸಂಪಾದಿಸುತ್ತಾನೆ. ನಮ್ಮೂರಿನಲ್ಲಿದ್ದಾಗ ಅದೇ ಜಾಣತನಕ್ಕೆ, ವರ್ಷಕ್ಕೆ ಹತ್ತುಸಾವಿರ ಸಿಗುತ್ತಿತ್ತು. ಎಂತಹ ಶಹಣೆ ಅಂತೀರಿ? ಅವ! ನಮ್ಮೂರಿನಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಈತ ಮೊಕದ್ದಮೆಯೊಂದರಲ್ಲಿ ವಾದಸರಣಿಯನ್ನು ಹೂಡಿ ಮುಗಿಸಿದಾಗ, ಮ್ಯಾಜಿಸ್ಟ್ರೇಟರು ಮಂಕು ಹಿಡಿದವರಂತಾಗಿ ಶಾಮುವಿನ ಕಕ್ಷಿಗಾರನನ್ನು ಖುಲಾಸೆಮಾಡುವುದು ಹಾಗಿರಲಿ, ನಡೆದಿದ್ದ ಅಪರಾಧಕ್ಕೆ ತಮಗೇ ತಾವು ಶಿಕ್ಷೆಯನ್ನು ವಿಧಿಸಿಕೊಂಡರು. ಅಂತಹ ಜಾಣ, ಶಾಮು.

ಆಗ ಬಿಳಿಟೋಪಿಯನ್ನು ಧರಿಸಿದ ಕೊರವ ಹೆಜ್ಜೆಯಮೇಲೆ ಹೆಜ್ಜೆಯನ್ನು ಸುಸ್ತಾಗಿ ಇಡುತ್ತಾ ಕ್ಲಬ್ಬಿಗೆ ಬಂದ. ಶಾಮು ಕೂಡಲೆ ಥಂಗನೆದ್ದು "ಇದೇನು ಬಂತೋ ನಮ್ಮ ಕೊರವನಿಗೆ. ರಾಜಕೀಯಕ್ಕೆ ಯಾವಾಗ ಸೇರಿಕೊಂಡನೋ; ಪಾಪ ಏನಾಗಿತ್ತು ಇವನಿಗೆ ಎಂದು ಕೂಗಿದ.

ಆ ಹೊತ್ತಿಗೆ ಕೊರವ ನಮ್ಮ ಮೇಜಿನ ಬಳಿಗೆ ಬಂದ. ಶಾಮುವನ್ನು ತಬ್ಬಿಕೊಂಡು, "ಚೆನ್ನಾಗಿದ್ದೀಯಾ" ಎಂದ.

ಕೊರವ ತಲೆಯಲ್ಲಿದ್ದುದು ಬಿಳಿ ಬ್ಯಾಂಡೇಜು ಎಂದು ನಮಗೆ ತಿಳಿಯಿತು. ಶಾಮು ವಿಶ್ವಾಸದ ಕಾತುರತೆಯಿಂದ ಕೊರವನನ್ನು ಕೇಳಿದ, "ತಲೆಗೆ ಹೇಗಪ್ಪಾ ಪೆಟ್ಟುಬಿತ್ತು; ಯಾವಾಗಪ್ಪ" ಎಂದು.

ಕೊರವ ಕುಳಿತುಕೊಂಡ. ತಲೆಗೆ ಕಟ್ಟಿದ್ದ ಬ್ಯಾಂಡೇಜಿನ ತುದಿಯನ್ನು ನೇವರಿಸುತ್ತಾ ಹೇಳಿದ. "ನಾನು ರಸ್ತೆಯಂಚಿನ ಪುಟ್ಟಪಾತಿನಲ್ಲಿ ನಡೆದುಹೋಗುತ್ತಿದ್ದೆ, ದೊಡ್ಡ ಚೌಕದ ಹತ್ತಿರ. ಆಟೋರಿಕ್ಷಾ ಒಂದು ಅಮಲಿನಲ್ಲೇ ಹಾದಿತಪ್ಪಿ ನನ್ನ ಪಕ್ಕದಲ್ಲಿ ಬರುತ್ತಿದ್ದ ಹಸುವನ್ನು ಗುಮ್ಮಿ ನನ್ನ ಮೇಲೇರಿತು. ತಲೆಗೆ ಪೆಟ್ಟುಬಿತ್ತು. ಕೂಡಲೇ ಚೌಕದಲ್ಲಿದ್ದ ಪೋಲೀಸಿನವನು ಓಡಿಬಂದ. ಹತ್ತಿರ ಇದ್ದ ದವಾಖಾನೆಗೆ ಇಲಾಜುಮಾಡಲು ಕರೆದುಕೊಂಡು ಹೋದ.

ಆಗ ಶಾಮು ಉದ್ರೇಕದಿಂದ ಅಂದ. "ಒಂದು ತಿಂಗಳು ರಜೆಗೆಂದು ಹಾಗೂ ಬೇರೇ ಮೊಕದ್ದಮೆಗೆಂದು ಬೆಂಗಳೂರಿಗೆ ಬಂದಿದ್ದೇನೆ. ವಿಮಾ ಕಂಪೆನಿಯಿಂದ ಹೇರಳ ಪರಿಹಾರ ಕೊಡಿಸುತ್ತೇನೆ ಕೊರವ, ಆದರದಿಂದ, ಹಣದ ಆಶೆ ಇಲ್ಲದೆ, ಕೇವಲ ಸ್ನೇಹದ ಕಾಣಿಕೆಯಾಗಿ ಈ ಸೇವೆಯನ್ನು ಸಲ್ಲಿಸುತ್ತೇನೆ ಅಂದಹಾಗೇ ಆ ಪೋಲೀಸಿನವನು ಮೊಕದ್ದಮೆಯನ್ನು ದಾಖಲ್‌ಮಾಡಿಕೊಂಡಿದ್ದಾನಲ್ಲವೇ" ಎಂದು ಹೇಳಿದ.

ಸನ್ಯಾಸಿಯ ದನಿಯಲ್ಲಿ ಕೊರವ ಉತ್ತರಿಸಿದ.

"ಶಾಮು ನಿನ್ನ ವಿಶ್ವಾಸದಿಂದಲೇ ನನ್ನ ತಲೆನೋವು ಸ್ವಲ್ಪ ಕಡಿಮೆಯಾಗಿದೆ. ಆದರೆ........ಅದರೆ........ಆ ಪೋಲೀಸಿನವನಿಗೆ, ಫುಟ್ಪಪಾತಿನಲ್ಲಿ ಹೋಗುತ್ತಿದ್ದ, ಹಸುವಿನ ನೆರಳಲ್ಲಿ ಸಾಗುತ್ತಿದ್ದ. ನನ್ನ ತಪ್ಪೇನೂ ಇಲ್ಲ. ಈ ಆಟೋರಿಕ್ಷಾದವನ ಮೇಲೆ ಮೊಕದ್ದಮೆ ದಾಖಲ್‌ಮಾಡಿಕೋ ಎಂದು ಹೇಳಿದೆ."

ಅವನೇನಂದ ಗೊತ್ತೆ ?

"ನೀವ್ಯಾಕ್ರೀ ಫುಟ್ಪಪಾತಿನಲ್ಲಿ ಯಾರಿಗೂ ಕಾಣದಹಾಗೆ ಹಸುವಿನ ಮರೆಯಲ್ಲಿ ನಡೆಯುತ್ತಿದ್ರೀ!! ಆಟೋರಿಕ್ಷಾದವನಿಗೆ ನೀವು ನಡೆಯುತ್ತಿದ್ದುದು ಹೇಗ್ರೀ ಗೊತ್ತಾಗಬೇಕು. ನಿಮ್ಮದೇ ತಪ್ಪು. ಅಲ್ಲದೆ ಆಟೋರಿಕ್ಷಾ ಸಾರಥಿಯ ಮಾವ ಈಗ ಎಂ ಎಲ್.ಎ. ಅವನ ತಂದೆ, ಸಚಿವರ ಮೈಗಾವಲಿನವ. ಅಲ್ಲದೆ ಅವನ ಅಕ್ಕನನ್ನೇ ನಾನು ಮದುವೆಮಾಡಿಕೊಂಡಿರುವುದು" ಎಂದ.

ಈ ಆಟೋರಿಕ್ಷಾ ಹಿಡಿಂಬನ ಅಕ್ಕನ ಕೈಹಿಡಿದು ಸೆರೆಗೆಬಿದ್ದ ಆ ಪೋಲೀಸಿನವನನ್ನು ಕಂಡು ಬಲು ಕನಿಕರ ಉಂಟಾಯ್ತು. ಮೊಕದ್ದಮೆ ಹೂಡುವುದು ಬೇಡ ಎಂದು ನಾನೇ ಅಂದೆ

ಶಾಮು! ನಮ್ಮೊಡನೆ ನೆಮ್ಮದಿಯಿಂದ ನಿನ್ನ ರಜೆಯನ್ನು ಅನುಭವಿಸು" ಎಂದು ಹಿತವಾದ ಹೇಳಿದ ಕೊರವ. ಹಿರಿಯ ವಯಸ್ಸು ಕೊರವನಿಗೆ. ಶಾಮುಗೆ ಅದೂ ಗೊತ್ತು!

ಶಹಣೆ ಶಾಮು ಏನು ಅನ್ನಲೂ ತಿಳಿಯದೆ "ಬೇರರ್" ಎಂದು ಕಷ್ಟಕಾಲ ಕ್ಕೊದಗುವ ಭಂಟನನ್ನು ಆಹ್ವಾನಿಸಿದ.

* * *

ಆ ಇಂಜಕ್ಷನ್‌ಗಳು ತುಂಬಾ ನೋವಾಗುತ್ತೇನೋ ಎಂದು ಕೇಳಿದೆವು ಕೊರವನನ್ನು, ಶುಕ್ರವಾರ ಸಂಜೆ.

ಹತ್ತು ಹನ್ನೆರಡು ದಿನಗಳ ಹಿಂದೆ ಕೊರವ "ಶಾಂತಿ ಸದನದ" ಮುಂದೆ ಬೆಳಿಗ್ಗೆ ಹೋಗುತ್ತಿದ್ದಾಗ, ಬೊಗಳುತ್ತಾ ಬೊಗಳುತ್ತಾ, ಅಲ್ಲಿಂದ ಓಡಿಬಂದ ನಾಯಿಯೊಂದು ಇವನನ್ನು ಕಾರಣವಿಲ್ಲದೇ ಕಟಕಾರಿಸಿ ಕಚ್ಚಿ, ಆ ಮಧ್ಯಾಹ್ನವೇ ಸತ್ತುಹೋಯ್ತು.

ಶಾಂತಿಸದನದ ಮಾಲೀಕ "ನಿಮ್ಮನ್ನು ಕಚ್ಚಿದ ೩ ಗಂಟೆಯಲ್ಲಿ ನನ್ನ 'ಫಿ, ಫಿ,' ಸತ್ತುಹೋಯಿತು. ಹುಚ್ಚು ಹಿಡಿದೇ ಸತ್ತುಹೋಯಿತು ಎಂದು ಅತ್ತೇಬಿಟ್ಟಿದ್ದ. "ಹುಚ್ಚುನಾಯಿ ಕಚ್ಚಿದೆ, ಕಾರಣ ದಿನಕ್ಕೊಂದರಂತೆ ಹದಿನಾಲ್ಕು ದಿನ ಇಂಜೆಕ್ಷನ್ ತೆಗೆದುಕೊಳ್ಳಲೇಬೇಕು" ಎಂದು ಆಸ್ಪತ್ರೆಯ ಡಾಕ್ಟರು ಕಟ್ಟಾಜ್ಞೆ ಇತ್ತಿದ್ದ.

ಇಂಜಕ್ಷನ್ ಅಷ್ಟೇನೂ ನೋವಾಗುವುದಿಲ್ಲ ಕಣ್ರೋ! ಆದರೆ ಆಸ್ಪತ್ರೆಯಲ್ಲಿನ ದೃಶ್ಯ ಬಲು ಸೊಗಸು ಕಣ್ರೋ! ಎಂದ, ಮಂದಸ್ಮಿತನಾಗಿ.

ನಮಗೆಲ್ಲಾ ಕೇಳುವ ಕುತೂಹಲ; ಕೆರಳಿದ ರಾಗ.

ಈ ಬೆಳಿಗ್ಗೆ ನೋಡಿ, ನನ್ನ ಇಂಜಕ್ಷನ್ ಆದಮೇಲೆ ಐದು ನಿಮಿಷ ಅಲ್ಲೇ ಹೊರಬೆಂಚಿನಮೇಲೆ ಸುಧಾರಿಸಿಕೊಳ್ಳುವ ವಾಡಿಕೆ. ನಾನಾದಮೇಲೆ ಕಾಲೇಜ್ ಹುಡುಗನೊಬ್ಬ ಇಂಜೆಕ್ಷನ್ನಿಗೆ ಸಿದ್ಧವಾಗಿದ್ದ. ಸುಮಾರು ೪೦-೪೫ ವರ್ಷದ ನರ್ಸು ಅವನ ಹೊಟ್ಟೆಯನ್ನು ಸಿದ್ಧಪಡಿಸುತ್ತಿದ್ದಳು. ನನ್ನೊಡನೆ ಕೂಡ ಚೆಲ್ಲಾಟವಾಡುತ್ತಿದ್ದ ಆಕೆ, ಅವನೊಡನೆ ಸ್ವಲ್ಪ ಮಿತಿಮೀರಿದಂತೆ ಕಾಣಿಸಿತು. ಆಗ M. O. ಬಂದರು. ಮೆಡಿಕಲ್ ಆಫೀಸರ್ ಬಂದರು ಎಂಬ ಹುಷಾರ್ ಕೂಗು ಕೇಳಿಸಿತು. ಆಸ್ಪತ್ರೆಯ M. O. ಅಂದರೆ, ಎಲ್ಲರೂ, ನಡುಗಿ ನಡುಗಿ ಕನಸಿನಲ್ಲಿ ಕೂಡ ಬೆಚ್ಚುತ್ತಿದ್ದರು. ಆದರೆ, ಆ ನರ್ಸು, ಆ ಹುಡುಗ ಇಬ್ಬರೂ ಶಾಂತಿಯಿಂದ, ಸಾವಧಾನವಾಗಿ, ಕಾರ್ಯಕ್ರಮವನ್ನು ಸಾಗಿಸುತ್ತಲೇ ಇದ್ದರು. M. O. ಬಂದರು. ನೋಡಿದರು. ಹಿಂತಿರುಗಿದರು—ಇಂಜಕ್ಷನ್ ಆಯಿತು. ಆ ಹುಡುಗ ನನ್ನ ಪಕ್ಕದಲ್ಲಿ ಬಂದು ಕುಳಿತ. ನರ್ಸು ಮತ್ತೊಬ್ಬನ ಹೊಟ್ಟೆಗೆ ರಂಗು ಹಚ್ಚಲು ಶುರುಮಾಡಿದ್ದಳು.

"ಏನು ಧೈರ್ಯವಯ್ಯಾ! ನಿಂದು! M. O. ಬಂದರೂ ನಿನಗೆ ಸ್ವಲ್ಪವೂ ಹೆದರಿಕೆಯೇ ಇರಲಿಲ್ಲವಲ್ಲಾ" ಎಂದೆ.

"ಅಯ್ಯೋ! ನಂಗೆ ತಿಳಿದಿತ್ರೀ! ಅವ—ಆಕೆ—ಅಳಿಯ ಅಂತ"

ನಂನಮ್ಮ ಅನುಭವಗಳನ್ನು ಮೆಲುಕುಹಾಕುತ್ತಾ—ಇದರರ್ಥ ತಿಳಿದೆವು.

* * * * * * *

"ಬೇರರ್! ಇದೇನೋ ಎಳನೀರು ತಂದಿರೋದು! ಹುಳಿಯಾಗಿದೆಯಲ್ಲೋ!" ಎಂದು ರೇಗಿ ಕೂಗಿದ ಕೌರವ, ಭಾನುವಾರ ಮಧ್ಯಾಹ್ನ.

"ಸಾರ್! ಇದು ಮೊರಾರ್ಜಿ ಎಳನೀರು" ಎಂದ ಬೇರರ್.

ಕೌರವ ನಕ್ಕ. ಒಪ್ಪಿದೆ ಬೇರರ್ ಎಂದ ಕೌರವ—ತನ್ನ ತುಟಿಗೆ ಗಾಜಿನ ಗ್ಲಾಸಿನ ತುಟಿಯನ್ನು ಚುಂಬಿಸುತ್ತಾ—

ನನ್ನ ಹಣೆಯಮೇಲಿನ ಅಡ್ಡಗಂಧ ಪ್ರಶ್ನಾರ್ಥವಾಯಿತು. ಅರವಾಮೊದ್ದನ ಕೆಂಪುನಾಮ ಪ್ರಶ್ನಾರ್ಥವಾಯಿತು. ಆನಂದುವಿನ ಅಂಗಾರ ಕೂಡ ಪ್ರಶ್ನಾರ್ಥವಾಯಿತು.

ಇದನ್ನು ಕಂಡ ಕೊರವ, ಒಂದು ಪುಟಾಣಿ ಕತೆ ಹೇಳಿದ.

ಪೋರ್ಟರ್ ನರಸರಾಜು, ಸ್ಟೇಷನ್ ಮಾಸ್ತರ ಬಳಿಗೆ ಹೋಗಿ, "ನನ್ನ ಹೆಂಡತಿ ಸಖತ್ ಖಾಯಿಲೆ ಮೂರುದಿನ ರಜೆ ದಯಪಾಲಿಸಿ" ಎಂದು.

"ನಿನ್ನ ಹೆಂಡ್ತಿ ಕಾಗದ ಬರೆದಿದ್ದಾಳೆ, ನೀನು ಆಕೇನ ಬಲು ಗೋಳುಹೊಯ್ಯುತ್ತೀಯಂತೆ. ಕುಡಿದು ಬಡಿಯುತ್ತೀಯಂತೆ, ನಿನಗೆ ರಜಾ ಕೊಡಬೇಡಿ" ಎಂದ ಮಾಸ್ತರು.

"ಹುಕುಂ! ಬಮೋಜೀಬ್!!—ನೀವು ಹೇಳಿದಂತೇ ಇಗಲಿ ಆದರೆ ಸಾರ್! ನಮ್ಮಿಬ್ಬರನ್ನೂ ಮಿಂಚಿದ ಸುಳ್ಳುಗಾರರು ಸಪ್ತಲೋಕಗಳಲ್ಲೂ ಇಲ್ಲವೇ ಅಲ್ಲ ಸಾರ್! ....ನನಗೆ ಮದುವೆಯಾಗಿಲ್ಲ!!

ಸ್ಟೇಷನ್‌ಮಾಸ್ತರು ನಾಲ್ಕುದಿನ ರಜೆ ಮಂಜೂರ್ಮಾಡಿದನಂತೆ.

—ಮಾರನೆ ಬೆಳಿಗ್ಗೆ ಇದರ ಮರ್ಮ ಅರ್ಥವಾಯಿತು ನನಗೆ, ಎರಡನೇದಿನ ಮೊದ್ದುವಿಗೆ, ಮೂರನೆಯದಿನ ಆನಂದನಿಗೂ ಕೂಡ!!

* * *

— o —



ಪೋಸ್ಟಾಫೀಸಿನಿಂದ ಬರೋವಾಗ ಜೇಬು ತುಂಬ ನಯೇಪೈಸೇನ ಅಲ್ಲವೇ ಮಾಸ್ತರರೇ!!


ಅಣ್ಣನನ್ನೇ ಸೆರೆಯಲ್ಲಿಟ್ಟು ಸಿಂಹಾಸನವೇರಲು ದುಷ್ಟನೊಬ್ಬ ನಡೆಸಿದ
ಪಿತೂರಿಗಳ ರೋಮಾಂಚಕಾರಕ ಸಾಹಸ ಚಿತ್ರ !

## 2-8-57 ರಿಂದ ಪ್ರಾರಂಭ

ಬೆಂಗಳೂರು : **ಸ್ಟೇಟ್ಸ್** ಮತ್ತು **ಲಕ್ಷ್ಮಿ**

ಮೈಸೂರು : **ರಾಜಕಮಲ್** ★ ಕೆ. ಜಿ. ಎಫ್ : ಕೃಷ್ಣಾ ಚಿತ್ರಮಂದಿರಗಳಲ್ಲಿ

ದಿನವಹಿ 3 ಪ್ರದರ್ಶನಗಳು



★

ಶಿವಕಾಮಿ ಪಿಕ್ಚರ್ಸ್‌ರವರ—

# ಪುದುಮೈ ಪಿತ್ತನ್

(ತಮಿಳು)

★

**ಟಿ. ಆರ್. ರಾಜಕುಮಾರಿ — ಎಂ. ಜಿ. ರಾಮಚಂದ್ರನ್**

**ಬಿ. ಎಸ್. ಸರೋಜ — ಚಂದ್ರಬಾಬು**

**ಇ. ವಿ. ಸರೋಜ ಮುಂತಾದವರು.**

ನಿರ್ದೇಶನ : **ರಾಮಣ್ಣ** ★ ಕಥೆ ಮತ್ತು ಸಂಭಾಷಣೆ : **ಮು. ಕರುಣಾನಿಧಿ**

**V. T D RELEASE**


For 3 way Beauty Treatment....
RAJA
SNOW
for Beauty & Complexion
MANYAM & CO
AMLA HAIR OIL
Kasturi Soap
RAJA
SNOW
AMLA HAIR OIL, KASTURI SOAP
MANYAM & CO BANGALORE MADRAS MADURAI BOMBAY